ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಮೇ 01, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 350 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999




## ರೈತರ ಶ್ರೇಯೋಭಿವೃದ್ಧಿಗೆ ಪ್ರಭಾ ಗೆಲ್ಲಿಸಿ

### ಹೊನ್ನಾಳಿ ತಾಲ್ಲೂಕು ಸಾಸ್ವೆಹಳ್ಳಿ ಚುನಾವಣಾ ಪ್ರಚಾರದಲ್ಲಿ ಸಚಿವ ಎಸ್ಸೆಸ್ಸೆಂ



ಹೊನ್ನಾಳಿ, ಏ.30- ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸಿದರೆ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಭರವಸೆ ನೀಡಿದರು.

ತಾಲ್ಲೂಕಿನ ಸಾಸ್ವೆಹಳ್ಳಿಯಲ್ಲಿ ಇಂದು ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಕೆರೆಗಳನ್ನೂ ತುಂಬಿಸುವ ಮೂಲಕ ಎಲಾ ಹಳ್ಳಿಗಳಿಗೂ ನೀರು ಪೂರೈಕೆ ಮಾಡುವುದು ನಮ್ಮ ಗುರಿಯಾಗಿದೆ. ಅಡಿಕೆ ತೋಟಗಳು ಸೇರಿದಂತೆ ಕೃಷಿ ಭೂಮಿಗೆ ನೀರು ಲಭಿಸುವಂತಾಗಬೇಕು. ಕೆರೆ-ಕಟ್ಟೆಗಳು ತುಂಬಿದರೆ ಅಂತರ್ಜಲ ವೃದ್ಧಿಯಾಗಿ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ನಿರುದ್ಯೋಗ ನಿವಾರಿಸುವ ನಿಟ್ಟಿನಲ್ಲಿ ನಾವು ಶ್ರಮಿಸುತ್ತೇವೆ. ಪದವಿ ಪೂರೈಸಿ ಹೊರಬರುವ ಯುವಜನರಿಗೆ ತಕ್ಷಣ ಉದ್ಯೋಗ ಲಭಿಸಿದರೆ ಒಳಿತಾಗುತ್ತದೆ. ಮುಂದಿನ ದಿನಗಳಲ್ಲಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತೇವೆ ಎಂದು ಹೇಳಿದರು.

ಎಸ್ಎಸ್ ಹೆಲ್ತ್ ಕೇರ್ ಟ್ರಸ್ಟ್ ಮೂಲಕ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಜನತೆಗೆ ಉಚಿತವಾಗಿ ವೈದ್ಯಕೀಯ ಸವಲತ್ತುಗಳನ್ನು ನೀಡುವ ಮೂಲಕ ಆರೋಗ್ಯ ರಕ್ಷಣೆಗೆ ಶ್ರಮಿಸುತ್ತಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ, ಮಹಿಳೆಯರ ಆರೋಗ್ಯ ರಕ್ಷಣೆಗೆ ಮುಂದಾಗಿದ್ದಾರೆ. ಆರೋಗ್ಯ ತಪಾಸಣೆ, ವಿವಿಧ ಪರೀಕ್ಷೆಗಳಿಗೆ ಸಂಕೋಚಗೊಂಡು ಮಹಿಳೆಯರು ಸಮಸ್ಯೆಗಳನ್ನು ಅನುಭವಿಸುತ್ತಾರೆ. ಇಂಥ ಶಿಬಿರಗಳಲ್ಲಿ ಸ್ತನ ಕ್ಯಾನ್ಸರ್‌ನಂಥ ಪ್ರಕರಣಗಳನ್ನು ಪ್ರಾರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ (4ನೇ ಪುಟಕ್ಕೆ)

## ಬಂಗಾರದ ಬೆಲೆ ಏರಿದರೂ ಬೇಡಿಕೆ ಶೇ.8ರಷ್ಟು ಹೆಚ್ಚಳ

ನವದೆಹಲಿ, ಏ. 30 - ಬಂಗಾರದ ಬೆಲೆ ಐತಿಹಾಸಿಕವಾಗಿ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದ್ದರೂ ಸಹ, ಮಾರ್ಚ್ ಚತುರ್ಥದಲ್ಲಿ ಬೇಡಿಕೆ ಶೇ.8 ರಷ್ಟು ಹೆಚ್ಚಾಗಿ 136.6 ಟನ್‌ಗಳಿಗೆ ತಲುಪಿದೆ ಎಂದು ವಿಶ್ವ ಬಂಗಾರ ಮಂಡಳಿ ತಿಳಿಸಿದೆ.



ರಿಸರ್ವ್ ಬ್ಯಾಂಕ್ ಸಹ ಹೆಚ್ಚು ಬಂಗಾರ ಖರೀದಿಸಿರುವುದು ಬೇಡಿಕೆ ಹೆಚ್ಚಾಗಲು ಕಾರಣವಾಗಿದೆ. ಬಂಗಾರದ ಮೌಲ್ಯವನ್ನು ಪರಿಗಣಿಸಿದಾಗ, ಬೇಡಿಕೆ ಶೇ.20ರಷ್ಟು ಹೆಚ್ಚಾಗಿ 75,470 ಕೋಟಿ ರೂ.ಗಳಿಗೆ ತಲುಪಿದೆ.

ಬಂಗಾರ ಮಂಡಳಿಯು ಜಾಗತಿಕ ವರದಿಯನ್ನು ಬಿಡುಗಡೆ ಮಾಡಿದ್ದು, ಅದರ ಪ್ರಕಾರ ಆಭರಣ ಹಾಗೂ ಹೂಡಿಕೆ ಸೇರಿದಂತೆ ಬಂಗಾರದ ಬೇಡಿಕೆ ಭಾರತದಲ್ಲಿ 136.6 ಟನ್‌ಗಳಿಗೆ ತಲುಪಿದೆ. ವರ್ಷದ ಹಿಂದೆ ಜನವರಿ - ಮಾರ್ಚ್ ಅವಧಿಯಲ್ಲಿ ಬೇಡಿಕೆ 126.3 ಟನ್ ಆಗಿತ್ತು.

ಆಭರಣ ವಿಭಾಗದಲ್ಲಿ ಬಂಗಾರದ ಬೇಡಿಕೆ ಶೇ.4ರಷ್ಟು ಹೆಚ್ಚಾಗಿ 95.5 ಟನ್‌ಗಳಿಗೆ ತಲುಪಿದೆ. ಹೂಡಿಕೆಗಾಗಿ ಬಂಗಾರದ ಬೇಡಿಕೆ ಶೇ.19ರಷ್ಟು ಹೆಚ್ಚಾಗಿ 41.1 ಟನ್‌ಗಳಿಗೆ ತಲುಪಿದೆ.

ಭಾರತದಲ್ಲಿ ಸಮಗ್ರ ಆರ್ಥಿಕ ವ್ಯವಸ್ಥೆ ಬಲವಾಗಿದೆ. ಬೆಲೆ ಐತಿಹಾಸಿಕ ಮಟ್ಟ ತಲುಪಿದರೂ ಸಹ, ಬೇಡಿಕೆಗೆ ಅವಕಾಶವಿದೆ ಎಂದು ಬಂಗಾರ ಮಂಡಳಿಯ ಭಾರತೀಯ ವಿಭಾಗದ ಪ್ರಾಂತೀಯ ಸಿಇಒ ಸಚಿನ್ ಜೈನ್ ತಿಳಿಸಿದ್ದಾರೆ.

ಈ ವರ್ಷ ಭಾರತದಲ್ಲಿ 700-800 ಟನ್ ಬಂಗಾರದ ಬೇಡಿಕೆ ಇರಲಿದೆ ಎಂದು ಜೈನ್ ನಿರೀಕ್ಷಿಸಿದ್ದಾರೆ.

ಆದರೆ, ಬಂಗಾರದ ಬೆಲೆ ಏರಿಕೆ ಮುಂದುವರೆದರೆ ಬೇಡಿಕೆಯೂ ಕಡಿಮೆ ಹಂತಕ್ಕೆ ಬರಲಿದೆ ಎಂದವರು ಅಂದಾಜಿಸಿದ್ದಾರೆ. 2023ರಲ್ಲಿ ಬಂಗಾರದ ಬೇಡಿಕೆ 747.5 ಟನ್ ಆಗಿತ್ತು. ಭಾರತ ಹಾಗೂ ಚೀನಾದಂತಹ ದೇಶಗಳಲ್ಲಿ ಬಂಗಾರದ ಬೆಲೆ ಕಡಿಮೆ ಇದ್ದಾಗ ಮಾತ್ರ ಬೇಡಿಕೆ ಹೆಚ್ಚಾಗುತ್ತದೆ. ಆದರೆ, ಈ ಬಾರಿ ಪರಿಸ್ಥಿತಿ ಬದಲಾಗಿದೆ. ಬೆಲೆ ಹೆಚ್ಚಾಗಿದ್ದಾಗಲೂ ಬೇಡಿಕೆ ಏರುಮುಖವಾಗಿದೆ. ಇದರ (4ನೇ ಪುಟಕ್ಕೆ)

## ಅಭಿವೃದ್ಧಿ ಮಾಡದ ಎರಡೂ ರಾಷ್ಟ್ರೀಯ ಪಕ್ಷಗಳನ್ನು ತಿರಸ್ಕರಿಸಿ




ಚನ್ನಗಿರಿ, ಏ.30- ಅಭಿವೃದ್ಧಿ ಮಾಡದ ಎರಡೂ ರಾಷ್ಟ್ರೀಯ ಪಕ್ಷಗಳ ತಿರಸ್ಕರಿಸಿ. ಸ್ವಾಭಿಮಾನಿಯಾಗಿ ಕಣಕ್ಕಿಳಿದಿರುವ ನನಗೊಂದು ಅವಕಾಶ ಕೊಡಿ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮನವಿ ಮಾಡಿದರು.

ತಾಲೂಕಿನ ಮರಡಿ, ತಣಿಗೆರೆ ಗ್ರಾಮದಲ್ಲಿ ರೋಡ್ ಶೋ ನಡೆಸಿ ಜನರನ್ನುದ್ದೇಶಿಸಿ ಮಾತನಾಡಿದ ಅವರು, ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಕ್ರಾಂತಿ ಮಾಡಿ ತೋರಿಸುತ್ತೇನೆ. ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸುಮಾರು 300 ಹಳ್ಳಿಗಳಿಗೂ ಹೆಚ್ಚು ಕಡೆಗಳಲ್ಲಿ ಬಸ್‌ಗಳಿಲ್ಲ. ಮೂರು ದಶಕ ಅಧಿಕಾರ ಅನುಭವಿಸಿದರು ಯಾಕೆ ಮಾಡಲಿಲ್ಲ ಎಂಬ ಪ್ರಶ್ನೆ ಕೇಳಿ. ಸೂಕ್ತ ಬಸ್ ಸೌಲಭ್ಯ ಇಲ್ಲದ ಕಾರಣ ಸಾವಿರಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಎಷ್ಟೋ ಮಕ್ಕಳು ಶಾಲೆ, ಕಾಲೇಜು ಅರ್ಧಕ್ಕೆ ಬಿಟ್ಟಿದ್ದಾರೆ. ಇವರ ಭವಿಷ್ಯ ಏನಾಗಬೇಕು. ಪೋಷಕರು ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು ಎಂದರು.

ಜಿಲ್ಲೆಯಲ್ಲಿ ಹೊಸ ನಾಯಕತ್ವ ಸೃಷ್ಟಿ ಆಗಬೇಕು. ಪ್ರತಿಯೊಬ್ಬರೂ ಸ್ವಾಭಿಮಾನಿಗಳು. ಬಡಿದೆಬ್ಬಿಸುವ ಕೆಲಸ ಮಾಡಿದ್ದೇನೆ. ಯಾವುದೇ ಕೈಗಾರಿಕೆ, ಶಿಕ್ಷಣ ಸಂಸ್ಥೆಗಳನ್ನು ತಂದಿಲ್ಲ. ಗೊತ್ತಿದ್ದೂ (4ನೇ ಪುಟಕ್ಕೆ)

## ಅಭಿವೃದ್ಧಿಗೆ ಮತ್ತೊಂದು ಹೆಸರೇ ಮೋದಿ : ಗಾಯತ್ರಿ

ಮಾಯಕೊಂಡ, ಏ.30- ಲೋಕಸಭಾ ಕ್ಷೇತ್ರದಲ್ಲಿ ಸಂಸದ ಡಾ.ಜಿ.ಎಂ.ಸಿದ್ದೇಶ್ವರ ಅವರ ಕಾರ್ಯ ವೈಖರಿ ಮತ್ತು ಅಭಿವೃದ್ಧಿ ನೋಡಿ ಕಾಂಗ್ರೆಸ್‌ಗೆ ನಡುಕ ಉಂಟಾಗಿದೆ. ಸಿದ್ದೇಶ್ವರ ಅವರ ದೂರದೃಷ್ಟಿ, ಸಮಾಜಮುಖಿ ಕೆಲಸ ನೋಡಿ ಜನ ಅವರನ್ನು 4 ಬಾರಿ ಸಂಸದರಾಗಿ ಆಯ್ಕೆ ಮಾಡಿದ್ದಾರೆ. ಈ ಬಾರಿ ಸಿದ್ದೇಶ್ವರ ಅವರ ಬದಲಾಗಿ ನಾನು ಚುನಾವಣೆಗೆ ಸ್ಪರ್ಧಿಸಿದ್ದೇನೆ ಎಂದು ಲೋಕ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಸವಾಪಟ್ಟಣ ಮತ್ತು ತ್ಯಾವಣಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆಳಲಗೆರೆ, ಕೋಟೆಹಾಳು, ಚಿರಡೋಣಿ, ಕಣಿವೆಬಿಳಚಿ, ಬಸವಾಪಟ್ಟಣ ಗ್ರಾಮಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ದೇಶದ ಅಭಿವೃದ್ಧಿಗೆ ಮತ್ತೊಂದು ಹೆಸರೇ ಮೋದಿ ಜೀ,



ದಾವಣಗೆರೆ ಅಭಿವೃದ್ಧಿಗೆ ಇನ್ನೊಂದು ಹೆಸರೇ ಜಿಎಂಎಸ್.

ಅಂದರೆ ಜಿ.ಎಂ.ಸಿದ್ದೇಶ್ವರ. ಕಾಂಗ್ರೆಸ್ ಅಭ್ಯರ್ಥಿಗೆ ಇಷ್ಟು ವರ್ಷ ಗ್ರಾಮೀಣ ಭಾಗದಲ್ಲಿ ತಮ್ಮ ಪತಿ, ಮಾವನವರು ಮಾಡಿರುವ ಕೆಲಸ ಹೇಳಿಕೊಳ್ಳಲು ಆಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ನಾವು ಮೋದಿ ಜೀ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಹೇಳಿಕೊಳ್ಳುತ್ತಿದ್ದೇವೆ. ನಮ್ಮ ಮನೆಯವರಾದ ಜಿ.ಎಂ.ಸಿದ್ದೇಶ್ವರ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಹೇಳಿಕೊಂಡು ಮತ ಕೇಳುತ್ತಿದ್ದೇವೆ. ಸ್ಮಾರ್ಟ್ ಸಿಟಿ ಯೋಜನೆ ಅಡಿ ಜಿಲ್ಲೆಗೆ 1071 ಕೋಟಿ ಅನುದಾನ, ಇಎಸ್ಐ ಆಸ್ಪತ್ರೆ ಮೇಲ್ದರ್ಜೆಗೆ, 12ಕೋಟಿ, ಅಮೃತ್ ಸರೋವರ್ ಯೋಜನೆಗೆ 7.35 ಕೋಟಿ, ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಕೋಟ್ಯಂತರ ರೂಪಾಯಿ ಅನುದಾನ ತಂದು ಅಭಿವೃದ್ಧಿ ಮಾಡಿದ್ದು, ಜಿ. ಎಂ.ಸಿದ್ದೇಶ್ವರ ಅವರು. ತ್ಯಾವಣಗಿ, (3ನೇ ಪುಟಕ್ಕೆ)

## ಜೆಡಿಎಸ್‌ನಿಂದ ಪ್ರಜ್ವಲ್ ಅಮಾನತ್ತು

ಬೆಂಗಳೂರು, ಏ. 30 - ಲೈಂಗಿಕ ಹಗರಣದಲ್ಲಿ ಸಿಲುಕಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಜೆಡಿಎಸ್‌ನಿಂದ ಅಮಾನತ್ತು ಮಾಡಲಾಗಿದೆ.



ಜಾತ್ಯತೀತ ಜನತಾ ದಳದ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹಾಗೂ ಜಿ.ಟಿ. ದೇವೇ ಗೌಡರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ಇಂದು ನಡೆದ ಕೋರ್ ಕಮಿಟಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಪಕ್ಷದ ಘನತೆ ಮತ್ತು ಗೌರವಕ್ಕೆ (3ನೇ ಪುಟಕ್ಕೆ)

## ಪತಂಜಲಿಯ 14 ಉತ್ಪನ್ನಗಳಿಗೆ ತಡೆ

ನವದೆಹಲಿ, ಏ. 30 – ಪತಂಜಲಿ ಆಯುರ್ವೇದ ಹಾಗೂ ದಿವ್ಯ ಫಾರ್ಮಸಿಗಳ 14 ಉತ್ಪನ್ನಗಳ ಅನುಮತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಡೆ ಹಿಡಿಯಲಾಗಿದೆ ಎಂದು ಉತ್ತರಾಖಂಡ ರಾಜ್ಯ ಅನುಮತಿ ಪ್ರಾಧಿಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕಳೆದ ಏಪ್ರಿಲ್ 16ರಂದು ಹರಿದ್ವಾರದ ಅಧಿಕಾರಿಗಳು ಯೋಗ ಗುರು ರಾಮದೇವ್, ಅವರ ಸಹಾಯಕ ಬಾಲಕೃಷ್ಣ, ದಿವ್ಯ ಫಾರ್ಮಸಿ ಹಾಗೂ ಪತಂಜಲಿ ಆಯುರ್ವೇದದ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದು ಪ್ರಾಧಿಕಾರ ಹೇಳಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪತಂಜಲಿ ಆಯುರ್ವೇದದ (4ನೇ ಪುಟಕ್ಕೆ)

## ವಾಣಿವಿಲಾಸ್ ಶಾರದಮ್ಮ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಹತ್ತಿರ, ಎಸ್‌ಎಲ್ ಪಿಯು ಕಾಲೇಜ್ ಎದುರು, #129, 'ಶಾರದ' ನಿವಾಸದ ವಾಸಿ ದಿ|| ವಾಣಿವಿಲಾಸ್ ಎಸ್.ಆರ್. ವೀರಪ್ಪನವರ ಧರ್ಮಪತ್ನಿ **ಶ್ರೀಮತಿ ವಾಣಿವಿಲಾಸ್ ಶಾರದಮ್ಮ** ಅವರು ದಿನಾಂಕ 30-04-2024ರ ಮಂಗಳವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01-05-2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ

ವಾಣಿವಿಲಾಸ್ ಎಸ್.ವಿ. ಮಹಾನಂದಸ್ವಾಮಿ ಮತ್ತು ಸಹೋದರರು, ಸಹೋದರಿ ಹಾಗೂ ಕುಟುಂಬ ವರ್ಗದವರು, ವಾಣಿವಿಲಾಸ್ ವಂಶಸ್ಥರು ಹಾಗೂ ಬಂಧು-ಮಿತ್ರರು.

ಮೊ. : 86185 05080, 79755 37561, 96112 44989



# ಸಂಸತ್ತಿನಲ್ಲಿ ಒಂದು ಬಾರಿಯೂ ಧ್ವನಿ ಎತ್ತದ ಬಿಜೆಪಿ ಸಂಸದರು : ವಿನಯ್ ಕುಲಕರ್ಣಿ



ಹರಿಹರ, ಏ.30- ರಾಜ್ಯದ ಜ್ವಲಂತ ಸಮಸ್ಯೆಗಳ ಪರವಾಗಿ ಕೇಂದ್ರದ ಸಂಸತ್ ಭವನದಲ್ಲಿ ಒಂದು ಬಾರಿ ಕೂಡ ಧ್ವನಿ ಎತ್ತದೇ ಇರುವಂತಹ ರಾಜ್ಯದ ಬಿಜೆಪಿ ಸಂಸದರನ್ನು ಆಯ್ಕೆ ಮಾಡುವುದಕ್ಕಿಂತ ಜನರ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಹೇಳುವಂತಹ ಬುದ್ಧಿವಂತಿಕೆ ಇರುವ ಕಾಂಗ್ರೆಸ್ ಪಕ್ಷದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸುವಂತೆ ಶಾಸಕ ವಿನಯ್ ಕುಲಕರ್ಣಿ ಕರೆ ನೀಡಿದರು.

ನಗರದ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದ ಸಭಾಂಗಣದಲ್ಲಿ, ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಮುಂಬರುವ ಬಸವೇಶ್ವರ ಜಯಂತಿ ಆಚರಣೆ ಪೂರ್ವ ಭಾವಿ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಭೀಕರ ಬರಗಾಲದಿಂದ ರೈತರ ಜೀವನ ಸಂಕಷ್ಟದ ಸ್ಥಿತಿಯಲ್ಲಿ ಇದ್ದರೂ ಮತ್ತು ಕೇಂದ್ರದಲ್ಲಿ ಆಡಳಿತ ಮಾಡುತ್ತಿರುವ ಕೇಂದ್ರ ಸರ್ಕಾರ ದಿನದಿಂದ ದಿನಕ್ಕೆ ದಿನಬಳಕೆಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿದ್ದರೂ. ರಾಜ್ಯದಿಂದ ಗೆದ್ದು ಹೋಗಿದ್ದ 28 ಸಂಸದರು ಒಂದು ದಿನ ಕೂಡ ರಾಜ್ಯದ ಜನರಿಗೆ ಆಗುತ್ತಿರುವ ತೊಂದರೆಗಳನ್ನು ತಿಳಿಸಿ, ಕೇಂದ್ರ ಸರ್ಕಾರದ ಗಮನಕ್ಕೆ ತರುವಂತಹ ಕೆಲಸ ಮಾಡಲು ಮುಂದಾಗಲಿಲ್ಲ ಎಂದು ಅವರು ಕಿಡಿಕಾರಿದರು.

**ಪ್ರಭಾ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಾರೆ**

ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಆಯ್ಕೆ ಮಾಡಿದರೆ ಸಂಸತ್ತು ಭವನದಲ್ಲಿ ಜಿಲ್ಲೆಯ ಜನರ ಪರವಾಗಿ ಧ್ವನಿ ಎತ್ತುವ ಮೂಲಕ ಜಿಲ್ಲೆಯ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಾರೆ. ಡಾ.ಪ್ರಭಾ ಅವರನ್ನು ಭಾರೀ ಬಹುಮತದೊಂದಿಗೆ ಗೆಲ್ಲಿಸಬೇಕು.

- ವಿನಯ್ ಕುಲಕರ್ಣಿ, ಶಾಸಕರು

ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ, ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಜಿಲ್ಲೆಯ ಜನರ ಕಷ್ಟಗಳನ್ನು ಸಂಪೂರ್ಣವಾಗಿ ಅರಿತುಕೊಂಡಿದ್ದಾರೆ. ಅವರಿಗೆ ಹಿಂದಿ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಯಲ್ಲಿ ಮಾತನಾಡುವಂತಹ ಬುದ್ಧಿವಂತಿಕೆ ಇದೆ. ಜಿಲ್ಲೆಯ ಜನರ ಕಷ್ಟಗಳ ಬಗ್ಗೆ ಕೇಂದ್ರದ ಸಂಸತ್ ಭವನದಲ್ಲಿ ಹೋರಾಟ ಮಾಡಿ, ಪಡೆಯುವಂತಹ ಜಾಣ್ಮೆ, ಚಾಕಚಕ್ಯತೆ ಇರುವುದರಿಂದ ಅವರನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸುವ ಕಾರ್ಯವನ್ನು ಮತದಾರರು ಮಾಡಬೇಕು ಎಂದು ಹೇಳಿದರು.

ಬಳ್ಳಾರಿ ಕಾಂಗ್ರೆಸ್ ಮುಖಂಡ ಅಲ್ಲಂ ವೀರಭದ್ರಪ್ಪ ಮಾತನಾಡಿ, ರಾಜ್ಯದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಯಲ್ಲಿ ಬಸವೇಶ್ವರರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕುವಂತೆ ಆದೇಶ ಮಾಡಿದ್ದಾರೆ. ಜೊತೆಗೆ, ಬಸವೇಶ್ವರರನ್ನು ಸಾಂಸ್ಕೃತಿಕ ನಾಯಕ ಎಂದು ಆದೇಶವನ್ನು ನೀಡಿದ್ದು, ರಾಜ್ಯದ ವೀರಶೈವ ಸಮಾಜದವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ ಎಂದು ಹೇಳಿದರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಲಿಂಗಾಯತ ಧರ್ಮದವರಿಗೆ ಅನ್ಯಾಯವಾ ದಾಗಲೆಲ್ಲಾ ಧ್ವನಿ ಎತ್ತಿ ಸಮಾಜದ ಜನರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತಾರೆ. ಅವರು ಸಮಾಜದ ಜನರ ಕಷ್ಟಗಳಿಗೆ ಸ್ಪಂದಿಸುತ್ತಿರುವಾಗ ಸಮಾಜದ ಜನರು ಅವರ ಕುಟುಂಬ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತವನ್ನು ಕೊಡುವ ಮೂಲಕ ಅವರಿಗೆ ಇನ್ನಷ್ಟು ಶಕ್ತಿಯನ್ನು ತುಂಬುವ ಕೆಲಸ ಮಾಡಿಬೇಕಾಗಿದೆ ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ರೇಣುಕಾ ಪ್ರಸಾದ್ ಮಾತನಾಡಿದರು.

ಕಾಂಗ್ರೆಸ್ ಮುಖಂಡರಾದ ಕೆ.ಸಿ. ಕೊಂಡಯ್ಯ, ನಂದಿಗಾವಿ ಶ್ರೀನಿವಾಸ್, ಟಿ.ಜೆ. ಮುರುಗೇಶಪ್ಪ, ನಿಖಿಲ್ ಕೊಂಡಜ್ಜಿ, ಡಿ. ಕುಮಾರ್, ಶಂಕರ್ ಖಟಾವ್ಕರ್, ಅರಸಿಕೇರಿ ಕೊಟ್ರೇಶ್, ದಾವಣಗೆರೆ ಪ್ರಕಾಶ್ ಪಾಟೀಲ್, ವೀರೇಶ್ ಯಾದವಾಡ್, ಜಿ.ವಿ ಪ್ರವೀಣ್, ಬೇವಿನಹಳ್ಳಿ ಆರ್.ಸಿ. ಪಾಟೀಲ್ ಇತರರು ಹಾಜರಿದ್ದರು.

# ಅಧಿಕಾರದಲ್ಲಿದ್ದವರು ಮಾಯಕೊಂಡಕ್ಕೆ ಕೈಗಾರಿಕೆ, ಶಿಕ್ಷಣ ಸಂಸ್ಥೆ ಯಾಕೆ ತರಲಿಲ್ಲ ?

## ಮಾಯಕೊಂಡ ಕ್ಷೇತ್ರದ ಪ್ರಚಾರದಲ್ಲಿ ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್ ಪ್ರಶ್ನೆ



ದಾವಣಗೆರೆ, ಏ. 30 - ಮಾಯಕೊಂಡ ಕ್ಷೇತ್ರಕ್ಕೆ ದೊಡ್ಡ ದೊಡ್ಡ ಕೈಗಾರಿಕೆಗಳು ಹಾಗೂ ಶಿಕ್ಷಣ ಸಂಸ್ಥೆಗಳು ಯಾಕೆ ತರಲು ಆಗಿಲ್ಲ. 30 ವರ್ಷಗಳ ಕಾಲ ಅಧಿಕಾರ ಅನುಭವಿಸಿದವರು ಜನಸೇವೆ ಯಾಕೆ ಮಾಡಲಿಲ್ಲ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ಕೇಳಬೇಕಾಗಿದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಪ್ರಶ್ನಿಸಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತೋಳಹುಣಸೆ, ಹಿರೇತೊಗಲೇರಿ, ಚಿಕ್ಕತೊಗಲೇರಿ, ಅತ್ತಿಗೆರೆ, ರಾಮಗೊಂಡನಹಳ್ಳಿ, ದ್ಯಾಮೇನಹಳ್ಳಿ, ಕಂದಗಲ್ಲು, ಮಾಯಕೊಂಡ ಸೇರಿದಂತೆ ಇತರೆ ಗ್ರಾಮಗಳಲ್ಲಿ ನಡೆಸಿದ ಪ್ರಚಾರದಲ್ಲಿ ಅವರು ಮಾತನಾಡಿದರು.

ಮಾಯಕೊಂಡ ಕ್ಷೇತ್ರವು ಇಷ್ಟೊತ್ತಿಗೆ ಅಭಿವೃದ್ಧಿಯಾಗಿರಬೇಕಿತ್ತು. ಜನರಿಗೆ ಉದ್ಯೋಗ ನೀಡುವಂಥ ಕೈಗಾರಿಕೆಗಳು ಬಂದಿಲ್ಲ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಂಥ ಶಿಕ್ಷಣ ಸಂಸ್ಥೆಗಳು ಬಂದಿಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಆಗಿಲ್ಲ ಎಂದೆನಿಸುತ್ತದೆ ಎಂದರು.

ಇಷ್ಟವಿಲ್ಲದೇ, ಅಭಿಪ್ರಾಯಕ್ಕೆ ವಿರೋಧವಾಗಿ ಯಾರೋ ಟಿಕೆಟ್ ತರುತ್ತಾರೆ. ನಾನು ಕಾಂಗ್ರೆಸ್, ಬಿಜೆಪಿಯಿಂದಲೂ ಬಂದಿಲ್ಲ. ಸ್ವಾಭಿಮಾನಿ ಅಭ್ಯರ್ಥಿಯಾಗಿ ನಿಮ್ಮ ಮುಂದೆ ಬಂದಿದ್ದೇನೆ. ಬಡವರು, ಹಿಂದುಳಿದವರು, ಹಳ್ಳಿಯಿಂದ ಬಂದವರು ಎಂಎಲ್ಎ, ಎಂಪಿ ಆಗುವುದು ಅಷ್ಟು ಸುಲಭವಿಲ್ಲ. ನಮ್ಮನ್ನು ಬೆಳೆಸುವುದಿಲ್ಲ, ಪ್ರೋತ್ಸಾಹಿಸುವುದೂ ಇಲ್ಲ. ನಮ್ಮನ್ನು ಬಳಸಿಕೊಂಡು ಜನರಿಂದ ಮತ ಪಡೆದು ಅವರು ಬೆಳೆಯುತ್ತಾರೆಯೇ ಹೊರತು ವಾಪಸ್ ನಿಮಗೇನೂ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಳ್ಳಿ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಾರೆ. ರಾಜಕಾರಣಿಗಳ ಮಕ್ಕಳು ದೊಡ್ಡ ದೊಡ್ಡ ಅಂತರರಾಷ್ಟ್ರೀಯ ಶಾಲೆಗಳಲ್ಲಿ ಓದುತ್ತಾರೆ. ಒಳ್ಳೆಯ ಶಿಕ್ಷಣ ಸಿಕ್ಕರೆ ಬಡವರ ಮಕ್ಕಳು ಯಾಕೆ ಐಎಎಸ್ ಅಧಿಕಾರಿಗಳಾಗುವುದಿಲ್ಲ ಎಂದು ನೀವೇ ಯೋಚಿಸಿ ಎಂದು ಕರೆ ನೀಡಿದರು.

ಶಿಕ್ಷಣ ಕ್ಷೇತ್ರದಿಂದ ಬಂದವರು, ಶಿಕ್ಷಣ ಪ್ರೇಮಿಗಳು ರಾಜಕಾರಣಕ್ಕೆ ಬರಬೇಕು. ಡಿಪ್ಲೋಮೊ, ಐಟಿಐ ಓದಿ ಮನೆಯಲ್ಲಿದ್ದಾರೆ. ಎಲ್ಲಿಯೂ ಕೆಲಸ ಸಿಗುತ್ತಿಲ್ಲ. ಶಾಮನೂರು ಶಿವಶಂಕರಪ್ಪ ಹಾಗೂ ಜಿ. ಎಂ. ಸಿದ್ದೇಶ್ವರ ಕುಟುಂಬದವರು ಅಧಿಕಾರದಲ್ಲಿದ್ದರೂ ಲಕ್ಷಾಂತರ ಯುವಕರು ಜಿಲ್ಲೆಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಉದ್ಯೋಗಾವಕಾಶ ನೀಡಲು ಸಾಧ್ಯವಾಗಿಲ್ಲ. ಅವರ ಸ್ವಂತ ಕಾರ್ಖಾನೆಗಳಲ್ಲಿ ಏಳರಿಂದ ಎಂಟು ಸಾವಿರ ರೂ. ಸಂಬಳ ನೀಡಿ ಕೆಲಸ ತೆಗೆದುಕೊಳ್ಳು ತ್ತಿದ್ದಾರೆ. ಶ್ರೀಮಂತರು ಶ್ರೀಮಂತ ರಾಗುತ್ತಿದ್ದಾರೆ, ಬಡವರು ಬಡವರಾಗುತ್ತಿದ್ದಾರೆ. ಲೋಕಸಭೆಯಲ್ಲಿ ನಿಮ್ಮ ಪರವಾಗಿ ಮಾತನಾಡದಿರುವುದು, ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯಗಳನ್ನು ಮಾಡದೇ ಇರುವುದೇ ಇದಕ್ಕೆಲ್ಲಾ ಕಾರಣ ಎಂದು ಹೇಳಿದರು.

ಅತ್ಯಂತ ಹೆಚ್ಚಿನ ಪ್ರಚಂಡ ಬಹುಮತದಿಂದ ನನ್ನನ್ನು ಗೆಲ್ಲಿಸಿದರೆ ಪ್ರಜಾಪ್ರಭುತ್ವದ ಗೆಲುವಾಗುತ್ತದೆ. ಸಂವಿಧಾನ ಜೀವಂತವಾಗಿದೆ, ಆಶಯಗಳು ಉಳಿದಿವೆ ಎಂದು ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಖುಷಿಯಾಗುತ್ತದೆ. ಸಂವಿಧಾನ ತಿದ್ದುಪಡಿ ಮಾಡಿ ತಿರುಚಲು ಬಿಡಬಾರದು ಎಂದು ಹೇಳಿದರು.

## ಅಮಿತ್ ಷಾ ಭಾಷಣ ತಿರುಚಿದ ಪ್ರಕರಣ 12 ಜನರಿಗೆ ನೋಟಿಸ್, ಇಬ್ಬರ ಬಂಧನ

ನವದೆಹಲಿ, ಏ. 30 – ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಭಾಷಣವನ್ನು ತಿರುಚಿದ ಬಗ್ಗೆ ಗುಜರಾತ್ ಪೊಲೀಸರು ತನಿಖೆ ನಡೆಸಿದ್ದು, ಕಾಂಗ್ರೆಸ್ ನಾಯಕ ಹಾಗೂ ಎ.ಎ.ಪಿ. ಪದಾಧಿಕಾರಿಯೊಬ್ಬರನ್ನು ಬಂಧಿಸಿದ್ದಾರೆ. ವಿರೋಧ ಪಕ್ಷಗಳ ಇನ್ನೂ 12 ಜನರಿಗೆ ನೋಟಿಸ್ ಕಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸೇರಿದಂತೆ 17 ಜನರಿಗೆ ನೋಟಿಸ್ ಕಳಿಸಲಾಗಿದೆ.

ಆದರೆ, ತನಿಖೆಗೆ ಹಾಜರಾಗುವುದಿಲ್ಲ, ಪ್ರತಿನಿಧಿಯನ್ನು ಕಳಿಸುವುದಾಗಿ ರೆಡ್ಡಿ ಹೇಳಿದ್ದಾರೆ.

## ಲೋಕಿಕೆರೆಯ ಕಾಂಗ್ರೆಸ್ ಮುಖಂಡರು ಬಿಜೆಪಿಗೆ ಸೇರ್ಪಡೆ



ದಾವಣಗೆರೆ, ಏ.30- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಲೋಕಿಕೆರೆ ಗ್ರಾಮದ ಕಾಂಗ್ರೆಸ್ ಮುಖಂಡರಾಗಿದ್ದ ಭೂಮೇಶ್, ಬಸಪ್ಪ, ಇಂದ್ರರಾಜ್, ಬಸಪ್ಪ, ಲಿಂಗರಾಜ್, ತಿಮ್ಮೇಶ್, ಅಂಜಿನಪ್ಪ, ಮಹಾಂತೇಶ್, ಚಿಕ್ಕ ಕುರುಬರಹಳ್ಳಿಯ ಕೆ.ಎಚ್.ಗಂಗಾಧರ್, ರುದ್ರೇಶ್, ದರ್ಶನ್, ಸತೀಶ್, ಕೆ.ಬಿ.ಬಸವರಾಜ್, ಜೆ.ಕೆ.ಬಸವರಾಜ್, ಚನ್ನಗಿರಿ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಲಿಂಗರಾಜ್, ಬಸವರಾಜ್ ಅವರು ಕಾಂಗ್ರೆಸ್ ತೊರೆದು ಸಂಸದ ಜಿ. ಎಂ.ಸಿದ್ದೇಶ್ವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡು, ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಿದರು.

## ಅಮರಾವತಿಯಲ್ಲಿ ಸಂಭ್ರಮದ ಗ್ರಾಮ ದೇವತೆಗಳ ಹಬ್ಬ



ಹರಿಹರ, ಏ.30- ನಗರದ ಹೊರವಲಯದ ಅಮರಾವತಿ ಗ್ರಾಮದಲ್ಲಿ ಗ್ರಾಮ ದೇವತೆಗಳಾದ ಚೌಡೇಶ್ವರಿ ದೇವಿ ಮತ್ತು ಊರಮ್ಮ ದೇವಿಯ ಹಬ್ಬವು ಸಡಗರ - ಸಂಭ್ರಮದಿಂದ ನಡೆಯಿತು.

ದೇವಿಗೆ ಬೆಳಗ್ಗೆ ವಿಶೇಷ ಪೂಜೆ ಅಲಂಕಾರ, ಕುಂಕುಮಾರ್ಚನೆ, ಭಕ್ತಾದಿಗಳಿಂದ ಫಲಪುಷ್ಪ ಸಮರ್ಪಣೆ ಹಾಗೂ ಹರಕೆ ಒಪ್ಪಿಸುವುದು. ಸಂಜೆ ಚರಗ ಬೇಯಿಸಿ, ರಾತ್ರಿ ಚರಗ ಇಳಿಸಿ ರಾಶಿ ಮಾಡಿ, ರಾತ್ರಿ 11-45 ಕ್ಕೆ ಅಮ್ಮನವರ ಮಾಂಗಲ್ಯಧಾರಣೆ ನಂತರ ಅಮ್ಮನವರನ್ನು ಮೆರವಣಿಗೆಯ ಉತ್ಸವದೊಂದಿಗೆ ಗೌಡ್ರು ಮನೆಯಿಂದ ಘಟ್ಟಿಗಡಿಗೆ ದ್ವೀಪ ಮತ್ತು ಗಂಗಣ್ಣನವರ ಮನೆಯಿಂದ ನೈವೇದ್ಯ, ಬಾಳೇಮರದವರ ಮನೆಯಿಂದ ಉಲಸಿನ ಪುಟ್ಟಿ ವಗೈರೆ ದೇವಸ್ಥಾನದ ಆವರಣಕ್ಕೆ ತಂದು ಬೆಳಗಿನ ಜಾವ ಹಿಟ್ಟಿನಿಂದ ಮಾಡಿದ ಕೋಣವನ್ನು ವಧೆ ಮಾಡಿದ ನಂತರ ಗ್ರಾಮದ ಪ್ರಮುಖ ವೃತ್ತದಲ್ಲಿ ಚರಗ ಚೆಲ್ಲುವ ಮೂಲಕ ಹಬ್ಬವನ್ನು ಆಚರಿಸಲಾಯಿತು.

ಗ್ರಾಮದ ಯುವಕರು ಉದೋ ಉದೋ, ಉಲಿಗ್ಗೆ ಉಲಿಗ್ಗೆ ಎಂದು ದೇವಿಯನ್ನು ಆರಾಧಿಸುವುದರೊಂದಿಗೆ ಡಿಜೆ ಸೌಂಡ್ ಸಿಸ್ಟಮ್ ತಾಳಕ್ಕೆ ತಕ್ಕಂತೆ ಕುಣಿದು ಕುಪ್ಪಳಿಸಿದರು. ನಾಳೆ ದಿನಾಂಕ 1 ರ ಬುಧವಾರ ಬೆಳಗ್ಗೆ 8.30 ಕ್ಕೆ ಪೆಂಡಾಲಿನಲ್ಲಿ ಅಮ್ಮನವರಿಗೆ ಮಂಗಳ ಸ್ನಾನ, ಅಲಂಕಾರ, ಸಾರ್ವಜನಿಕರಿಂದ ಫಲ ಸಮರ್ಪಣೆ, ಸಂಜೆ 5 ಗಂಟೆಗೆ ವಿವಿಧ ವಿನೋದಾವಳಿಗಳು ಶ್ರೀದೇವಿ ಪುರಾಣ, ಭಜನೆ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿವೆ.

## ಚುನಾವಣಾ ಸಂದರ್ಭದಲ್ಲಿ ಕೇಜ್ರಿವಾಲ್ ಬಂಧನಕ್ಕೆ ಸುಪ್ರೀಂ ಪ್ರಶ್ನೆ

ನವದೆಹಲಿ, ಏ. 30 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಂಧಿಸಿರುವುದನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದ್ದು, ಬದುಕು ಹಾಗೂ ಸ್ವಾತಂತ್ರ್ಯ ಅತ್ಯಂತ ಮುಖ್ಯ ಎಂದು ತಿಳಿಸಿದೆ.

ಅಕ್ರಮ ಹಣ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಕೇಜ್ರಿವಾಲ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠ, ಜಾರಿ ನಿರ್ದೇಶನಾಲಯದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಎದುರು ಹಲವಾರು ಪ್ರಶ್ನೆಗಳನ್ನು ಮುಂದಿಟ್ಟಿದೆ. ಈ ಪ್ರಕರಣದಲ್ಲಿ ಕೇಜ್ರಿವಾಲ್ ಯಾವ ರೀತಿಯ ಸಂಬಂಧ ಹೊಂದಿದ್ದಾರೆ. ಜಾರಿ ನಿರ್ದೇಶನಾಲಯ ಇದುವರೆಗೂ ಯಾವುದೇ ಮುಟ್ಟುಗೋಲು ಕ್ರಮ ತೆಗೆದು ಕೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

### ಶಿರಮಗೊಂಡನಹಳ್ಳಿ ಎಸ್.ಕೆ. ಭದ್ರಾಚಾರಿ ನಿಧನ



ಶಿರಮಗೊಂಡನಹಳ್ಳಿ ಗ್ರಾಮದ ವಾಸಿ ಎಸ್.ಕೆ. ಭದ್ರಾಚಾರಿ (74) ಅವರು ದಿನಾಂಕ : 30.4.2024ರ ಸಂಜೆ 6 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 1.5.2024ರ ಬೆಳಿಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

### ಪ್ರಭಾಕರಯ್ಯ ಟಿ.ಎಂ. ನಿಧನ




ದಾವಣಗೆರೆ ಡೋರ್ ನಂ. 1263/3, ಗಾಂಧಿನಗರ ಅಂಬೇಡ್ಕರ್ ಸರ್ಕಲ್ ಹತ್ತಿರದ ವಾಸಿ ಪ್ರಭಾಕರಯ್ಯ ಟಿ.ಎಂ. (60) ಇವರು ದಿನಾಂಕ 30.04.2024ರ ಮಂಗಳವಾರ ರಾತ್ರಿ 10.15ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.5.2024ರ ಬುಧವಾರ ಮಧ್ಯಾಹ್ನ 12 ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ರೆಬಲ್‌ಸ್ಟಾರ್ ಅಂಬರೀಶ್ ಅಭಿಮಾನಿ ಇಟಗಿ ಬಸವರಾಜ್ ನಿಧನ



ದಾವಣಗೆರೆ ಸಿಟಿ ಆವರಗೆರೆ ವಾಸಿ ರೆಬಲ್‌ಸ್ಟಾರ್ ಅಂಬರೀಶ್ ಅಭಿಮಾನಿ ಇಟಗಿ ಬಸವರಾಜ್ (55) ಇವರು ದಿನಾಂಕ 30.04.2024ರ ಮಂಗಳವಾರ ರಾತ್ರಿ 10ಕ್ಕೆ ನಿಧನರಾದರು. ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.5.2024ರ ಬುಧವಾರ ಮಧ್ಯಾಹ್ನ 12 ಕ್ಕೆ ಆವರಗೆರೆಯ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಸಾಣೇಹಳ್ಳಿಯಲ್ಲಿ ಇಂದು 'ವಚನ ಸಂವಿಧಾನ' ಬಿಡುಗಡೆ




ಸಾಣೇಹಳ್ಳಿಯ ಎಸ್. ಎಸ್. ರಂಗಮಂದಿರದಲ್ಲಿ ಇಂದು ಬೆಳಿಗ್ಗೆ 10-30ರಿಂದ ಬಸವಣ್ಣನವರ ಬಹುಮುಖ ವ್ಯಕ್ತಿತ್ವ ಕುರಿತಂತೆ, ಕರ್ನಾಟಕದ 30 ಜನ ಚಿಂತಕರು ವಚನಗಳನ್ನಾಧರಿಸಿ ಬರೆದಿರುವ 'ವಚನ ಸಂವಿಧಾನ' ಕೃತಿಯ ಲೋಕಾರ್ಪಣೆ ಮಾಡಲಾಗುವುದು ಎಂದು ಶ್ರೀ ಶಿವಕುಮಾರ ಕಲಾ ಸಂಘದ ಪ್ರಕಟಣೆ ತಿಳಿಸಿದೆ. ಕೃತಿಯ ಸಂಪಾದಕರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವ ವಹಿಸುವರು. ಸಾನ್ನಿಧ್ಯವನ್ನು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಮತ್ತು ಡಾ. ಜಗದ್ಗುರು ಗಂಗಾದೇವಿ ಮಾತಾಜಿ ವಹಿಸುವರು.

ಡಾ. ಜಗದ್ಗುರು ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಕೃತಿ ಲೋಕಾರ್ಪಣೆ ಮಾಡುವರು. ಶ್ರೀ ಶರಚ್ಚಂದ್ರ ಮಹಾಸ್ವಾಮಿಗಳು ಮತ್ತು ಡಾ. ಸಬಿತಾ ಬನ್ನಾಡಿ ಗ್ರಂಥಾವಲೋಕನ ಮಾಡುವರು.

ಗ್ರಂಥದ ವಿವಿಧ ಲೇಖಕರು ತಮ್ಮ ಬರಹಗಳ ಸಾರ ರೂಪದ ವಿಷಯ ಮಂಡಿಸುವರು.'ವಚನ ಸಂವಿಧಾನ' ಅನುಸರಣಾ ಕ್ರಮಗಳ ಕುರಿತಂತೆ 50ಕ್ಕೂ ಹೆಚ್ಚು ಸ್ವಾಮೀಜಿಯವರು ಸಂವಾದ ನಡೆಸುವರು.

'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎನ್ನುವುದನ್ನು ಸಾಂಕೇತಿಕ ವಾಗಿಸಿಕೊಂಡು ಮಠಗಳು, ಸಾಹಿತಿಗಳು, ಸರ್ಕಾರ ಮುಂದೇನು ಮಾಡಬಹುದು ಎನ್ನುವ ಬಗ್ಗೆ ಮಹತ್ವದ ಚಿಂತನ-ಮಂಥನ ನಡೆಯಲಿದೆ.

## ದಕ್ಷಿಣ ಏಷಿಯಾದಲ್ಲಿ ವಾಡಿಕೆಗಿಂತ ಹೆಚ್ಚಿನ ಮುಂಗಾರು

ನವದೆಹಲಿ, ಏ. 30 – ಬರುವ ಮುಂಗಾರಿನಲ್ಲಿ ದಕ್ಷಿಣ ಏಷಿಯಾದ ಬಹುತೇಕ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ ಎಂದು ಸೌತ್ ಏಷಿಯನ್ ಕ್ಲೈಮೇಟ್ ಲುಕೌಟ್ ಫೋರಂ ಮುನ್ಸೂಚನೆ ನೀಡಿದೆ.

ಬರುವ ಆಗಸ್ಟ್ - ತಿಂಗಳಲ್ಲಿ ಲಾ ನೀನಾ ಪರಿಸ್ಥಿತಿ ಇರಲಿದೆ. ಹೀಗಾಗಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ. ಆದರೂ, ಉತ್ತರ, ಪೂರ್ವ ಹಾಗೂ ಈಶಾನ್ಯ ಭಾಗಗಳ ಕೆಲವೆಡೆ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ತಿಳಿಸಲಾಗಿದೆ.

## ನಗರದ ಭಾವಸಾರ ಕ್ಷತ್ರಿಯ ಸಮಾಜದಿಂದ ಕಾಂಗ್ರೆಸ್‌ಗೆ ಬೆಂಬಲ



ದಾವಣಗೆರೆ,ಏ.30- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಭಾವಸಾರ ಕ್ಷತ್ರಿಯ ಸಮಾಜದವರು ಇಂದು ಭೇಟಿ ಮಾಡಿ ಬೆಂಬಲ ಘೋಷಿಸಿದರು. ಈ ಸಂದರ್ಭದಲ್ಲಿ ದಾವಣಗೆರೆ ಭಾವಸಾರ ಕ್ಷತ್ರಿಯ ಸಮಾಜದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಸಮಾಜ ಬಾಂಧವರು ಉಪಸ್ಥಿತರಿದ್ದರು.

## ಸಾಕು ಪ್ರಾಣಿಗಳ ರ‍್ಯಾಂಪ್ ವಾಕ್

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸ್ವೀಪ್ ಸಮಿತಿ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ, ಸಾರ್ವತ್ರಿಕ ಲೋಕಸಭಾ ಚುನಾವಣೆ ಅಂಗವಾಗಿ ಇಂದು ಸಂಜೆ 5 ಗಂಟೆಗೆ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಬಾಸ್ಕೆಟ್ ಬಾಲ್ ಗ್ರೌಂಡ್‌ನಲ್ಲಿ ಸಾಕು ಪ್ರಾಣಿಗಳ ರ‍್ಯಾಂಪ್ ವಾಕ್ ಆಯೋಜಿಸಲಾಗಿದೆ.

ಮತದಾನ ಜಾಗೃತಿ ಅಂಗವಾಗಿ ಏರ್ಪಡಿಸಿದ ಸಾಕು ಪ್ರಾಣಿಗಳ ರ‍್ಯಾಂಪ್ ವಾಕ್‌ನಲ್ಲಿ ಭಾಗವಹಿಸುವ ಸಾಕು ಪ್ರಾಣಿ (ನಾಯಿ, ಬೆಕ್ಕು) ಗಳಿಗೆ ಉಚಿತವಾಗಿ ರೇಬಿಸ್ ಲಸಿಕೆ ಮತ್ತು ಜಂತು ನಾಶಕ ಔಷಧಿಗಳನ್ನು ವಿತರಣೆ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಭಾಗವಹಿಸಿದ ನಗರ ಹಾಗೂ ಸುತ್ತಮುತ್ತಲಿನ ಸಾಕುಪ್ರಾಣಿ (ನಾಯಿ,ಬೆಕ್ಕು) ಗಳ ಮಾಲೀಕರಿಗೆ ಸೂಕ್ತ ಬಹುಮಾನ ನೀಡಲಾಗುವುದು ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ. ಚಂದ್ರಶೇಖರ್ ಎಸ್. ಸುಂಕದ ತಿಳಿಸಿದ್ದಾರೆ.

## ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ನಗರದಲ್ಲಿ ಇಂದು ಎಸ್ಸೆಸ್ ರೋಡ್ ಷೋ

ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿರುವ ಡಾ. ಪ್ರಭಾ, ಮಲ್ಲಿಕಾರ್ಜುನ್ ಅವರ ಪರವಾಗಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ರೋಡ್ ಷೋ ಮೂಲಕ ಮತಯಾಚಿಸುವರು.

ಸಂಜೆ 4.30ಕ್ಕೆ ಗಡಿಯಾರ ಕಂಬದ ಸರ್ಕಲ್‌ನಿಂದ ಆರಂಭವಾಗುವ ಈ ರೋಡ್ ಷೋ, ಬಾರ್ ಲೈನ್ ರಸ್ತೆ, ಛಲವಾದಿ ಕೇರಿ, ಎಂ.ಬಿ.ಕೇರಿ. ಒಕ್ಕಲಿಗರ ಪೇಟೆ, ಕಾಯಿಪೇಟೆ, ಸ್ವಾಗೇರ ಪೇಟೆ, ಸ್ಟಾರ್ ನಾಗಪ್ಪನವರ ಮನೆ ಮುಂಭಾಗದಿಂದ ಜನತಾ ವಿದ್ಯಾಲಯ, ಜಾಲಿನಗರದ ಮೂಲಕ ಹೊಂಡದ ಸರ್ಕಲ್( ರಾಜವೀರ ಮದಕರಿ ನಾಯಕ ವೃತ್ತ) ನಗರದೇವತೆ ದುರ್ಗಾಂಬಿಕಾ ದೇವಸ್ಥಾನ, ದೊಡ್ಡಪೇಟೆ ಗಣೇಶ ದೇವಸ್ಥಾನದವರೆಗೂ ನಡೆಯಲಿದೆ.

ಈ ರೋಡ್ ಷೋನಲ್ಲಿ ಮುಖಂಡರುಗಳಾದ ಮಹಾಪೌರರಾದ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಮಾಜಿ ಮೇಯರ್ ಅನಿತಾಬಾಯಿ, ಮಾಜಿ ಸದಸ್ಯ ಪಿ.ಎನ್.ಚಂದ್ರಶೇಖರ್, ದೂಡಾ ಮಾಜಿ ಅಧ್ಯಕ್ಷ ಮಾಲತೇಶ್ ರಾವ್, ನಗರಸಭೆ ಮಾಜಿ ಅಧ್ಯಕ್ಷ ಬಿ.ವೀರಣ್ಣ, ಮಾಜಿ ಉಪಾಧ್ಯಕ್ಷ ಎಸ್. ಎನ್.ಚಂದ್ರಪ್ಪ, ಮಾಜಿ ಸದಸ್ಯ ಬಾಬುರಾವ್ ಸಾಳಂಕಿ, ವಾರ್ಡ್ ಅಧ್ಯಕ್ಷರುಗಳಾದ ಪರಮೇಶ್, ಶಂಭು, ವಿಶ್ವನಾಥ, ಡಿಶ್ ಮಂಜುನಾಥ್, ಸತೀಶ್ ಪಾಲ್ಗೊಳ್ಳುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ವೀರಭದ್ರೇಶ್ವರ ಸ್ವಾಮಿ ಗುಗ್ಗಳ

ದಾವಣಗೆರೆ, ಏ.30- ನಗರದ ಶಾಮನೂರು ರಸ್ತೆಯ ಎಸ್.ಎಸ್.ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಹಾಗಣಪತಿ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಹಾಗೂ ಕೆಂಡಾದರ್ಚನೆ ಕಾರ್ಯಕ್ರಮವು ದಿನಾಂಕ 2ರ ಗುರುವಾರ ಬೆಳಿಗ್ಗೆ ಎಡೆಯೂರು ಕ್ಷೇತ್ರದ ಷ॥ ಬ್ರ॥ ರೇಣುಕಾ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯುವುವು. ಅಂದು ಬೆಳಿಗ್ಗೆ 5 ಗಂಟೆಗೆ ರುದ್ರಾಭಿಷೇಕ ನಂತರ 7 ಗಂಟೆಗೆ ಮಹಾರಾಜಪೇಟೆಯಿಂದ ಗುಗ್ಗಳ ಹೊರಟು ದೇವಸ್ಥಾನ ತಲುಪಿದ ನಂತರ ಕೆಂಡದಾರ್ಚನೆ ನಡೆಯಲಿದೆ.

# ಹಮಾಲರ ಸಂಘದ ಸದಸ್ಯರಿಗೆ ಗುರುತಿನ ಕಾರ್ಡ್ ವಿತರಣೆ



ಹರಪನಹಳ್ಳಿ, ಏ. 30 - ಹಮಾಲರು ತಮ್ಮ ಬೆವರು ಹಾಗೂ ಶಕ್ತಿಯನ್ನು ವಿನಿಯೋಗಿಸಿ ಶ್ರಮವಹಿಸಿ ದುಡಿಯುವ ಜನ ಆಗಿದ್ದು, ದುಡಿಯುವ ಜನತೆ ಪರವಾಗಿ ಶ್ರಮಿಸುವವರಿಗೆ ಮತ ಹಾಕಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಹೇಳಿದರು.

ಪಟ್ಟಣದ ಕೋಟೆ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಭಾನುವಾರ ಹರಪನಹಳ್ಳಿ ತಾಲ್ಲೂಕು ಲಾರಿ ಹಮಾಲರ ಸಂಘ (ಸಿಐಟಿಯು)ದ ಸದಸ್ಯರಿಗೆ ಸದಸ್ಯತ್ವ ಕಾರ್ಡ್ ವಿತರಣೆ ಹಾಗೂ ರಾಜಕೀಯ ಜಾಗೃತಿ ಕಾರ್ಯಕ್ರಮವನ್ನು ಅಕ್ಕಿ ಮೂಟೆ ಹೊರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ದುಡಿಯುವ ವರ್ಗಕ್ಕೆ ಸರ್ಕಾರಗಳು, ಅನುದಾನವನ್ನು ಮೀಸಲಿಡಬೇಕು ಹಾಗೂ ದುಡಿಯುವ ಜನರಿಗೆ ಆರೋಗ್ಯ ವಿಮೆ ಅಗತ್ಯವಾಗಿದೆ ಎಂದ ಅವರು ಹಮಾಲರು ಕೂಡ ಆರ್ಥಿಕವಾಗಿ ಸಬಲರಾಗಲು ಮುಂದೆ ಬರಬೇಕು. ತಮ್ಮ ಮಕ್ಕಳಿಗೆ ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಉತ್ತಮ ಶಿಕ್ಷಣವನ್ನು ಕೊಡಿಸುವ ಮುಖಾಂತರ ಉತ್ತಮ ಭವಿಷ್ಯ ರೂಪಿಸಬೇಕು ಎಂದರು.

ರಾಜ್ಯ ಸಿಐಟಿಯು ಕಾರ್ಯದರ್ಶಿ ಮಹೇಶ್ ಪತ್ತಾರ ಮಾತನಾಡಿ, ಮಾರುಕಟ್ಟೆ ಚಕ್ರದಲ್ಲಿ ಹಮಾಲರು ಬೆನ್ನು ಕೊಡದೆ ಹೋದರೆ, ಜೀವನ ನಡೆಸುವುದು ಕಷ್ಟ. ಪ್ರತಿಯೊಂದು ಕೆಲಸವನ್ನು ಮಾಡುವವರು ದೇಶದ, ರಾಜ್ಯದ ಜನರ ಬದುಕಿನ ಭಾಗವಾ ಗಿದ್ದಾರೆ ಹಮಾಲರು. ತಂತ್ರಜ್ಞಾನ ಮುಂದುವರೆ ದಿದ್ದು ಹಮಾಲರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬೇಕು, ಸರ್ಕಾರದ ಸೌಲಭ್ಯ ಪಡೆದುಕೊಳ್ಳಬೇಕು ಎಂದರು.

**ಹರಪನಹಳ್ಳಿ**

ರಂಗ ಕರ್ಮಿ ಪರಶುರಾಮಪ್ಪ ಮಾತನಾಡಿ, ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿ ಶ್ರಮಕ್ಕೆ ತಕ್ಕ ಬೆಲೆ ನೀಡಬೇಕು. ಇದಕ್ಕೆ ಚುನಾವಣೆ ನಂತರ ದರಪಟ್ಟಿಯನ್ನು ನಿಗದಿಪಡಿಸಲಾಗುವುದು ಎಂದರು.

ಗೊಬ್ಬರ, ಬೀಜ ಹಾಗೂ ಕೃಷಿ ಪರಿಕರಗಳ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಪಿ.ಕೆ.ಎಂ. ನಾಗಲಿಂಗಯ್ಯ ಮಾತನಾಡಿದರು.

ಈ ಸಂದರ್ಭದಲ್ಲಿ ದೇವದಾಸಿ ಮಹಿಳಾ ವಿಮೋಚನಾ ಸಂಘದ ಅಧ್ಯಕ್ಷರಾದ ಟಿ.ವಿ. ರೇಣುಕಮ್ಮ, ರಹಮತ್‌ವುಲ್ಲಾ, ಹಮಾಲರ ಸಂಘದ ಅಧ್ಯಕ್ಷ ವೆಂಕಟೇಶ, ಉಪಾಧ್ಯಕ್ಷ ಬಿ.ಚಾಂದ್‌ಭಾಷ, ಕಾರ್ಯದರ್ಶಿ ಗೌಸ್ ಮೊಹಿದ್ದೀನ್, ಕಸಾಪ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಬುಡೇನ್‌ಸಾಬ್, ಹೆಚ್. ಫಕ್ಕೀರಪ್ಪ, ಊರಪ್ಪ, ಅಕ್ಬರ್ ಸಾಬ್, ಸಾಲಿಯಾ, ರಹಮತ್ತಿ ಸೇರಿದಂತೆ ಇತರರು ಇದ್ದರು.

# ಅಡಿಕೆ ಸಂಬಂಧಿತ ಕೈಗಾರಿಕೆಗಳು, ಸೂಳೆಕೆರೆ ಸಂರಕ್ಷಣೆಗೆ ಆದ್ಯತೆ

## ಚನ್ನಗಿರಿ ತಾಲ್ಲೂಕಿನಲ್ಲಿನ ಪ್ರಚಾರದಲ್ಲಿ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಭರವಸೆ

ಚನ್ನಗಿರಿ, ಏ. 30 - ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ರೋಡ್ ಶೋ ನಡೆಸಿ, ಭರ್ಜರಿ ಪ್ರಚಾರ ನಡೆಸಿದರು.

ಕೆರೆಬಿಳಚಿ, ನಲ್ಲೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಪಟಾಕಿ ಸಿಡಿಸಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು. ಚನ್ನಗಿರಿ ಪಟ್ಟಣದಲ್ಲಿ ಭಾರೀ ಸಂಖ್ಯೆಯಲ್ಲಿ ಯುವಕರು, ಹಿತೈಷಿಗಳು, ಅಭಿಮಾನಿಗಳು, ಬೆಂಬಲಿಗರು ಬೈಕ್ ರ್‍ಯಾಲಿ ನಡೆಸಿದರು. ಬಳಿಕ ವಿನಯ್ ಕುಮಾರ್ ಅವರು ಪಟ್ಟಣದಲ್ಲಿ ಪವರ್ ಸ್ಟಾರ್ ದಿ. ಪುನೀತ್ ರಾಜಕುಮಾರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

**ಕೆರೆಬಿಳಚಿಯಲ್ಲಿ ರ್‍ಯಾಲಿ :** ಕೆರೆಬಿಳಚಿ ಗ್ರಾಮದಲ್ಲಿ ವಿನಯ್ ಕುಮಾರ್ ಅವರಿಗೆ ಅದ್ದೂರಿ ಸ್ವಾಗತ ಸಿಕ್ಕಿತು. ಮುಸ್ಲಿಂ ಸಮಾಜದವರು ವಿನಯ್ ಕುಮಾರ್ ಅವರಿಗೆ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಈ ವೇಳೆ ಗ್ರಾಮದ ಮುಖಂಡರಾದ ಇರ್ಫಾನ್, ಇಂತಿಯಾಜ್, ಮೊಹಮ್ಮದ್ ಅಲಿ, ಜಬೀರ್, ಫಯಾಜ್, ಮೊಹಮ್ಮದ್ ರಫೀಕ್, ಜಬಿ, ಶರೀಫ್, ಆಸೀಫ್ ಮತ್ತಿತರರು ಹಾಜರಿದ್ದರು.

ಚನ್ನಗಿರಿ ಪಟ್ಟಣದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು ಚನ್ನಗಿರಿ ತಾಲ್ಲೂಕಿನಲ್ಲಿ ಅಡಿಕೆ ಬೆಳೆಗಾರರು ಹೆಚ್ಚಿದ್ದಾರೆ. ಇದುವರೆಗೆ ಅಡಿಕೆ ಸಂಬಂಧಿತ ಕೈಗಾರಿಕೆಗಳು ಯಾಕೆ ಬಂದಿಲ್ಲ. ಬೆಳೆಗಾರರ ಹಿತ ಕಾಪಾಡುವಂಥ ಕೆಲಸ ಆಗದಿರುವುದು ಬೇಸರದ ಸಂಗತಿ. ಅಡಿಕೆ



### ಸೂಳೆಕೆರೆ ನೀರು ಖಾಲಿ ಮಾಡಿದವರ್ಯಾರು.?

**ಏಷ್ಯಾಖಂಡದ ಎರಡನೇ ಅತಿದೊಡ್ಡ ಸೂಳೆಕೆರೆಯಲ್ಲಿ ಈಗ ನೀರು ಕಡಿಮೆಯಾಗಿದೆ. ಇಲ್ಲಿನ ನೀರು ಖಾಲಿ ಮಾಡಿದವರು ಯಾರು. ಭೀಮಸಮುದ್ರಕ್ಕೆ ಇಲ್ಲಿಂದ ನೀರು ಹೋಗುತ್ತದೆ. ಭದ್ರಾ ಮೇಲ್ದಂಡೆ ಯೋಜನೆಯಡಿ ಕೆರೆ ತುಂಬಿಸುವ ಯೋಜನೆ ಪೂರ್ಣಗೊಳಿಸಲು ಬಿಡುತ್ತಿಲ್ಲ. ಹಾಗಾಗಿ, ಇಂಥವರಿಗೆ ತಕ್ಕ ಪಾಠ ಕಲಿಸಿ ಎಂದು ಜಿ. ಬಿ. ವಿನಯ್ ಕುಮಾರ್ ಹೇಳಿದರು. ಈ ವೇಳೆ ಸ್ಥಳದಲ್ಲಿದ್ದವರು ಸೂಳೆಕೆರೆ ನೀರನ್ನು ಖಾಲಿ ಮಾಡಿದ್ದು ಜಿ.ಎಂ. ಸಿದ್ದೇಶ್ವರ ಎಂಬ ಘೋಷಣೆಗಳನ್ನು ಕೂಗಿದರು.**

ಮಾತ್ರವಲ್ಲ, ಚಾಕೋಲೇಟ್, ಪೇಂಟಿಂಗ್ ಸೇರಿದಂತೆ ಉಪ ಉತ್ಪನ್ನಗಳ ಕೈಗಾರಿಕೆಗಳು ಬಂದರೆ ಮತ್ತಷ್ಟು ಅಡಿಕೆಗೆ ಬೆಲೆ ಬರುತ್ತದೆ. ಈ ಬಗ್ಗೆ ಅಧಿಕಾರ ನಡೆಸಿದವರು ಯಾಕೆ ಯೋಚಿಸಿಲ್ಲ ಎಂದು ಪ್ರಶ್ನಿಸಿದರು.

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಸೇರಿದಂತೆ, ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಬಹುದಿತ್ತು. ಭದ್ರಾ ನದಿ ನೀರು ಬಂದರೂ ಎಷ್ಟೋ ರೈತರಿಗೆ ಸಿಗುತ್ತಿಲ್ಲ. ಇದಕ್ಕೆ ಕಾರಣ ರಾಜಕೀಯ ಇಚ್ಛಾಶಕ್ತಿ. ಚನ್ನಗಿರಿ ಪಟ್ಟಣದಲ್ಲಿ ಸುಸಜ್ಜಿತವಾದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಇಲ್ಲ. ಉದ್ಯೋಗಾವಕಾಶ ಸೃಷ್ಟಿಸುವಂಥ ಕೈಗಾರಿಕೆಗಳು ಇಲ್ಲ. ಹೈಟೆಕ್ ಶಾಲೆಗಳಿಲ್ಲ, ಗುಣಮಟ್ಟದ ಶಿಕ್ಷಣ ಗ್ರಾಮೀಣ ಭಾಗದ ಮಕ್ಕಳಿಗೆ ಸಿಗುತ್ತಿಲ್ಲ. ಇಷ್ಟೆಲ್ಲಾ ಸಮಸ್ಯೆಗಳಿರುವ ಈ ಕ್ಷೇತ್ರದಲ್ಲಿ ನನಗೆ ಹೆಚ್ಚು ಮುನ್ನಡೆ ಬರುವಂತೆ ಆಶೀರ್ವದಿಸಿ ಎಂದು ಮನವಿ ಮಾಡಿದರು.

ವಿನಯ ನಡಿಗೆ ಹಳ್ಳಿ ಕಡೆಗೆ ಎಂಬಂತೆ ವಿನಯ ನಡಿಗೆ ಪಾರ್ಲಿಮೆಂಟ್ ಕಡೆಗೆ ಕಳುಹಿಸಿಕೊಡಿ. ಯುವಕರೇ ನನ್ನನ್ನು ಗೆಲ್ಲಿಸಬೇಕು. ಶೇ. 33 ರಷ್ಟು ಯುವಪೀಳಿಗೆಯ ಮತ ಇದೆ. ನನಗೆ ನೀಡುವ ಪ್ರತಿಯೊಂದು ಮತವೂ ಹಾಳಾಗುವುದಿಲ್ಲ. ಕ್ರಮ ಸಂಖ್ಯೆ 28 ಗ್ಯಾಸ್ ಸಿಲಿಂಡರ್ ಹಾಕುವ ಮತ ಅಭಿವೃದ್ಧಿಗೆ ನೀಡಿದಂತೆ ಎಂದು ಹೇಳಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ, ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ. ಶಾಸಕರಾಗಿದ್ದವರು ಏನೆಲ್ಲಾ ಮಾಡಬಹುದಿತ್ತು. ಯಾವ ನಾಯಕನನ್ನು ಬೆಳೆಸಲಿಲ್ಲ. ಬಡವರಿಗಾಗಿ ಒಳ್ಳೆಯ ವಿದ್ಯಾಸಂಸ್ಥೆ ಕೊಟ್ಟಿಲ್ಲ. ಚುನಾವಣೆಯಲ್ಲಿ ದುಡ್ಡು ಹಂಚಿ ಮತ ಪಡೆಯುತ್ತಾರೆ. ನಾವು ಸ್ವಾಭಿಮಾನಿಗಳಾಗಬೇಕು. ಈ ಎರಡೂ ಕ್ಷೇತ್ರಗಳಲ್ಲಿ ಆಗಿರುವ ಅಭಿವೃದ್ಧಿ ಕಡಿಮೆ. ಒಮ್ಮೆ ನನಗೆ ಅವಕಾಶ ಕೊಟ್ಟು ನೀಡಿ. ಯಾವ ರೀತಿ ಅಭಿವೃದ್ಧಿ ಮಾಡಬಹುದು ಎಂಬುದನ್ನು ನಾನು ಮಾಡಿ ತೋರಿಸುತ್ತೇನೆ ಎಂದು ಹೇಳಿದರು.

ಈ ವೇಳೆ ಚನ್ನಗಿರಿ ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಗೋಪಿ, ಚಂದ್ರಣ್ಣ, ಎ. ಸಿ. ಚಂದ್ರು, ಮಂಜು ನೀತಿಗೆರೆ, ಕೃಷ್ಣಪ್ಪ, ಕುಶಾಲ್ ಮತ್ತಿತರರು ಉಪಸ್ಥಿತರಿದ್ದರು.

# ಅಭಿವೃದ್ಧಿಗೆ ಹೆಸರೇ ಮೋದಿ



**(1ನೇ ಪುಟದಿಂದ)** ಬಸವಾಪಟ್ಟಣ ಪಂಚಾಯಿತಿ ವ್ಯಾಪ್ತಿಗೆ 2.75 ಕೋಟಿ ರೂಪಾಯಿ ಅನುದಾನ ತಂದು ರೈತ ಸಂಪರ್ಕ ಕೇಂದ್ರ ಹಾಗೂ ಬೀಜೋತ್ಪಾದನಾ ಕೇಂದ್ರದ ಬಲವರ್ಧನೆ ಮಾಡಿದ್ದು ಜಿ.ಎಂ.ಸಿದ್ದೇಶ್ವರ ಅವರು ಎಂಬುದನ್ನು ನೀವು ಮರೆಯಬಾರದು ಎಂದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ, ತ್ಯಾವಣಗಿ, ಬಸವಾಪಟ್ಟಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಕೊಡುಗೆ ಏನು ಎಂಬುದನ್ನು ನೀವೇ ಯೋಚನೆ ಮಾಡಿ. ನೀವು ಕಾಂಗ್ರೆಸ್‌ಗೆ ಮತ ಹಾಕಿದರೆ ನಿಮ್ಮ ಊರು, ಕ್ಷೇತ್ರ ಅಭಿವೃದ್ಧಿ ಶೂನ್ಯವಾಗುತ್ತೆ ಎಂದರು.

ಮಾಜಿ ಶಾಸಕ ಪ್ರೊ.ಎನ್.ಲಿಂಗಣ್ಣ ಮಾತನಾಡಿ, ದೇಶ ಸುರಕ್ಷತೆಯಿಂದ ಇರಬೇಕು ಅಂದರೆ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು. ದಾವಣಗೆರೆ ಲೋಕಸಭಾ ಕ್ಷೇತ್ರ ಅಭಿವೃದ್ಧಿಯಾಗಬೇಕು ಅಂದರೆ ಗಾಯತ್ರಿ ಸಿದ್ದೇಶ್ವರ ಅವರು ಸಂಸದರಾಗಬೇಕು ಎಂದರು.

ಮಾಜಿ ಶಾಸಕ ಬಸವರಾಜ್ ನಾಯ್ಕ್ ಮಾತನಾಡಿ, ದಾವಣಗೆರೆ ಲೋಕಸಭಾ ಕ್ಷೇತ್ರದ ಲಂಬಾಣಿ ಸಮುದಾಯದ ಪ್ರತಿಯೊಬ್ಬರೂ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಪರ ನಿಲ್ಲಬೇಕು. ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿ, ದೆಹಲಿಗೆ ಕಳುಹಿಸಬೇಕು ಎಂದರು ಕರೆ ನೀಡಿದರು.

ಸಂಗಮೇಶ್ ದ್ರಾಕ್ಷಾಯಿಣಿ ನಿರಾಣಿ, ಪ್ರೇಮ, ಮಾಗನೂರು ಪ್ರಭಣ್ಣ, ಅಣಬೇರು ಜೀವನಮೂರ್ತಿ, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಜಿ.ಎಸ್.ಶ್ಯಾಮ್, ಮಂಡಲದ ಅಧ್ಯಕ್ಷ ದೇವೇಂದ್ರಪ್ಪ, ಹನುಮಂತನಾಯ್ಕ, ಮಂಜಾನಾಯ್ಕ್, ಹನುಮಂತಪ್ಪ, ಮಂಡಲದ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಬೂತ್ ಮಟ್ಟದ ಅಧ್ಯಕ್ಷರು, ಗ್ರಾಮದ ಬಿಜೆಪಿ ಮುಖಂಡರು ಸೇರಿದಂತೆ ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಮುಖಂಡರು ಇದ್ದರು.

**ದಾವಣಗೆರೆ ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಬಹಿರಂಗ ಚರ್ಚೆಗೆ ನಾವು ಸಿದ್ಧರಿದ್ದೇವೆ. ಜಿಲ್ಲೆಗೆ ನಿಮ್ಮ ಕೊಡುಗೆ ಏನು ಅಂತ ಚರ್ಚೆ ಮಾಡುವುದಕ್ಕೆ ಬನ್ನಿ ಎಂದು ನಮ್ಮ ಮುಖಂಡರಾದ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಅವರು ಓಪನ್ ಚಾಲೆಂಜ್ ಕೊಟ್ಟಿದ್ದಾರೆ. ನಾವು ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ನಮ್ಮ ಸಾಮಾನ್ಯ ಕಾರ್ಯಕರ್ತರು ನಿಮ್ಮ ಜೊತೆ ಚರ್ಚೆ ಮಾಡ್ತಾರೆ. ಅಭಿವೃದ್ಧಿ ವಿಚಾರ ಚರ್ಚೆ ಮಾಡೋ ಮನಸ್ಸಿದ್ದರೆ ಬನ್ನಿ.**

**- ಗಾಯತ್ರಿ ಸಿದ್ದೇಶ್ವರ, ಬಿಜೆಪಿ ಅಭ್ಯರ್ಥಿ**

**ದೇಶದ ಹಿತದೃಷ್ಟಿಯಿಂದ ಬಿಜೆಪಿ, ಜೆಡಿಎಸ್, ಜೆಡಿಯು ರಾಜ್ಯದಲ್ಲಿ ಮೈತ್ರಿ ಮಾಡಿಕೊಂಡಿವೆ. ಮೈತ್ರಿಯ ಭಾಗವಾಗಿ ನಮ್ಮ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಗೆಲ್ಲಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಸಂಸದ ಜಿ.ಎಂ.ಸಿದ್ದೇಶ್ವರ ಅವರು ಪ್ರತಿ ಬಾರಿ ಬೆಂಬಲ ಕೋರುತ್ತಿದ್ದರು. ಈ ಬಾರಿ ಪ್ರೀತಿ ಪೂರ್ವಕವಾಗಿ ಅವರಿಗೆ ಬೆಂಬಲ ನೀಡುತ್ತಿದ್ದೇನೆ. ನೀವೆಲ್ಲರೂ ಅವರ ಪರವಾಗಿ ನಿಂತು ಗೆಲ್ಲಿಸಬೇಕು.**

**- ತೇಜಸ್ವಿ ಪಟೇಲ್, ಜೆಡಿಎಸ್ ಮುಖಂಡ**

# ಮತಗಳ ಜಿಹಾದ್ ಮೂಲಕ 'ಸಂಘಿ' ಸರ್ಕಾರ ಕಿತ್ತೆಸೆಯಲು ಕರೆ

**ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್, ಸೊಸೆ ಮರಿಯಾ ಆಲಂ ವಿರುದ್ಧ ಪ್ರಕರಣ**

ಫರೂಕಾಬಾದ್,ಏ. 30 – ಲೋಕಸಭಾ ಚುನಾವಣೆಯಲ್ಲಿ 'ಮತಗಳ ಜಿಹಾದ್' ನಡೆಸುವಂತೆ ಹಾಗೂ ಬಿಜೆಪಿ ಪರ ನಿಲ್ಲುವ ಮುಸ್ಲಿಮರಿಗೆ ಸಮಾಜದಿಂದ ಬಹಿಷ್ಕಾರ ಹಾಕುವಂತೆ ಸಮಾಜವಾದಿ ಪಕ್ಷದ ನಾಯಕಿ ಮರಿಯಾ ಆಲಂ ಕರೆ ನೀಡಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ಸಲ್ಮಾನ್ ಖುರ್ಷೀದ್ ಅವರು ತಮ್ಮ ಸೊಸೆ ಮರಿಯಾ ನೀಡಿರುವ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಉತ್ತರ ಪ್ರದೇಶದ ಫರೂಕಾಬಾದ್‌ನಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿ ನವಲ್ ಕಿಶೋರ್ ಶಾಕ್ಯ ಪರವಾಗಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಆಲಂ, 'ಸಂಘಿ' ಸರ್ಕಾರವನ್ನು ಹೊಡೆದೋಡಿಸಲು ಮತಗಳ ಜಿಹಾದ್ ನಡೆಸಬೇಕು ಎಂದು ಕರೆ ನೀಡಿದ್ದಾರೆ.

ಕೆಲ ಮುಸ್ಲಿಮರು ಬಿಜೆಪಿ ಪರವಾಗಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದಕ್ಕೆ ಆಕ್ಷೇಪಿಸಿದ ಅವರು, ಮುಸ್ಲಿಂ ಸಮಾಜದವರು ಇಂಥವರಿಗೆ ಬಹಿಷ್ಕಾರ ಹಾಕಬೇಕು ಎಂದು ಕರೆ ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್, ಜಿಹಾದ್ ಎಂದರೆ ಪರಿಸ್ಥಿತಿಯ ವಿರುದ್ಧ ಹೋರಾಟ. ಸಂವಿಧಾನ ರಕ್ಷಿಸಲು ಮತಗಳ ಜಿಹಾದ್ ನಡೆಸಬೇಕು ಎಂಬ ಉದ್ದೇಶ ಆಲಂ ಅವರದ್ದಾಗಿರಬೇಕು ಎಂದಿದ್ದಾರೆ. ಆಲಂ ಭಾಷಣದ ಬಗ್ಗೆ ಚುನಾವಣಾ ಸರ್ವೇಕ್ಷಣಾ ತಂಡ ದೂರು ದಾಖಲಿಸಿದೆ. ನಂತರ ಜನಪ್ರತಿನಿಧಿ ಕಾಯ್ದೆ ಹಾಗೂ ಐ.ಪಿ.ಸಿ. ಕಾಯ್ದೆಯಡಿ ಆಲಂ ಹಾಗೂ ಖುರ್ಷೀದ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಜೆಡಿಎಸ್‌ನಿಂದ ಪ್ರಜ್ವಲ್ ಅಮಾನತ್ತು

**(1ನೇ ಪುಟದಿಂದ)** ಹಾಗೂ ಮುಖಂಡತ್ವಕ್ಕೆ ಸಾಕಷ್ಟು ಧಕ್ಕೆ ಉಂಟಾಗಿರುತ್ತದೆ.

ರಾಜ್ಯದಲ್ಲಿ ಪ್ರಸ್ತುತ ಕಾಂಗ್ರೆಸ್ ಸರ್ಕಾರ, ಮಹಿಳೆಯರ ಮೇಲೆ ಎಸಗಿದೆ ಎಂದು ಹೇಳಲಾಗಿರುವ ಚಿತ್ರಗಳು ಮತ್ತು ವಿಡಿಯೊಗಳ ಬಗ್ಗೆ ತನಿಖೆ ನಡೆಸಲು ಒಂದು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದೆ.

ತನಿಖಾ ಸಂಸ್ಥೆ ಈಗಾಗಲೇ ತನ್ನ ಕಾರ್ಯವನ್ನು ಆರಂಭಿಸಿರುವುದರಿಂದ ತನಿಖೆಗೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಎದುರಾಗಬಾರದೆಂಬ ಉದ್ದೇಶದಿಂದ ಇಂತಹ ಕ್ರಮ ಕೈಗೊಂಡಿದ್ದೇವೆ ಎಂದು ಪಕ್ಷದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಪಕ್ಷದ ಸಂವಿಧಾನ ಮತ್ತು ನಿಯಮಗಳ ಅಡಿಯಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾದ ಪ್ರಜ್ವಲ್ ರೇವಣ್ಣ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತು ಗೊಳಿಸಲಾಗಿದೆ. ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಅನುಮೋದನೆ ಪಡೆದು ಪಕ್ಷ ತಮ್ಮ ಸಂಸದನ ಮೇಲೆ ಕಠಿಣ ಕ್ರಮ ಕೈಗೊಂಡಿದೆ.

ಪ್ರಜ್ವಲ್ ರೇವಣ್ಣ ಹಾಸನ ಲೋಕಸಭಾ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಮರು ಆಯ್ಕೆ ಬಯಸಿ, ಚುನಾವಣಾ ಕಣದಲ್ಲಿದ್ದಾರೆ.

ಈ ಕ್ಷೇತ್ರಕ್ಕೆ ಏಪ್ರಿಲ್ 26ರಂದು ಮತದಾನ ನಡೆದಿದ್ದು, ಮತದಾನಕ್ಕೂ 48 ಗಂಟೆಗಳ ಮುನ್ನ ಇಡೀ ಕ್ಷೇತ್ರದಲ್ಲಿ ಸಂಸದರ ವಿರುದ್ಧದ ಅಶ್ಲೀಲ ಪೆನ್ ಡ್ರೈವ್ ಬಹಿರಂಗಗೊಂಡಿತ್ತು. ಪೆನ್ ಡ್ರೈವ್ ಬಗ್ಗೆ ಕ್ಷೇತ್ರದಲ್ಲಷ್ಟೇ ಅಲ್ಲದೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಚರ್ಚೆ ನಡೆಯುತ್ತಿದ್ದಂತೆ ಮಹಿಳಾ ಆಯೋಗ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ಸಿಎಂ ಸಿದ್ದರಾಮಯ್ಯ ಅವರು, ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆದೇಶ ಮಾಡಿ ಪ್ರಕರಣದ ತನಿಖೆಗೆ ಎಸ್‌ಐಟಿ ನೇಮಕ ಮಾಡಿ ಆದೇಶ ಹೊರಡಿಸಿದ್ದರು.

# ಪೆನ್‌ಡ್ರೈವ್ ಪ್ರಕರಣಕ್ಕೆ ದಿನಕ್ಕೊಂದು ತಿರುವು

### ಚಾಲಕ, ಬಿಜೆಪಿ ಮುಖಂಡ ಆರೋಪ-ಪ್ರತ್ಯಾರೋಪ

ಬೆಂಗಳೂರು, ಏ. 30 – ಸೋರಿಕೆಯಾಗಿರುವ ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿಡಿಯೋಗಳ ಬಗ್ಗೆ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ಹಾಗೂ ಬಿಜೆಪಿ ನಾಯಕ ಜಿ. ದೇವರಾಜೇ ಗೌಡ ಪರಸ್ಪರರ ವಿರುದ್ಧ ಆರೋಪ ಮಾಡಿದ್ದಾರೆ.

ಸಾಮಾಜಿಕ ಮಾಧ್ಯಮದ ಮೂಲಕ ವಿಡಿಯೋ ಮೆಸೇಜ್ ಒಂದನ್ನು ಕಳಿಸಿರುವ ಕಾರ್ತಿಕ್, ಪ್ರಜ್ವಲ್ ನನ್ನ ಜಮೀನು ಕಸಿದುಕೊಂಡಿದ್ದು, ನನ್ನ ಹೆಂಡತಿಗೆ ಥಳಿಸಿರುವ ಜೊತೆಗೆ ಮಾನಸಿಕ ಹಿಂಸೆ ನೀಡಿರುವುದಾಗಿ ಹೇಳಿದ್ದಾರೆ.

ದೇವೇಗೌಡ ಕುಟುಂಬದ ವಿರುದ್ಧ ಹೋರಾಟ ನಡೆಸಲು ನೆರವಾಗುವಂತೆ ನಾನು ಜಿ. ದೇವರಾಜೇ ಗೌಡ ಬಳಿ ತೆರಳಿದ್ದೆ ಎಂದು ಕಾರ್ತಿಕ್ ಹೇಳಿದ್ದಾರೆ. 2023ರಲ್ಲಿ ದೇವರಾಜೇ ಗೌಡ ಅವರು ಹೊಳೆನರಸೀಪುರದಲ್ಲಿ ಬಿಜೆಪಿ



ಟಿಕೆಟ್‌ನಿಂದ ಹೆಚ್.ಡಿ. ರೇವಣ್ಣ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಈ ನಡುವೆ, ನಾನು ಚಿತ್ರ ಹಾಗೂ ವಿಡಿಯೋಗಳನ್ನು ಬಿಡುಗಡೆ ಮಾಡದಂತೆ ಪ್ರಜ್ವಲ್ ರೇವಣ್ಣ ತಡೆಯಾಜ್ಞೆ ತಂದಿದ್ದರು. ಈ ವಿಡಿಯೋ ಹಾಗೂ ಚಿತ್ರಗಳನ್ನು ನೀಡಿದರೆ ನ್ಯಾಯಾಧೀಶರೊಬ್ಬರಿಗೆ ಹಸ್ತಾಂತರಿಸಿ ತಡೆಯಾಜ್ಞೆ ತೆರವುಗೊಳಿಸುವುದಾಗಿ ತಿಳಿಸಿದ್ದರು. ಅವರನ್ನು ನಂಬಿ ಚಿತ್ರ ಹಾಗೂ ವಿಡಿಯೋ ಕೊಟ್ಟಿದ್ದೆ. ಅವರನ್ನು ಹೊರತು ಪಡಿಸಿ ಬೇರೆ ಯಾರಿಗೂ ನಾನು ಚಿತ್ರ ಹಾಗೂ ವಿಡಿಯೋ ಕೊಟ್ಟಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ನಾಯಕರು ಪ್ರಜ್ವಲ್‌ಗೆ ನಿಕಟವರ್ತಿಯಾಗಿದ್ದರು. ಹೀಗಾಗಿ ದೇವರಾಜೇ ಗೌಡ ಬಳಿ ಹೋದೆ. ಆದರೆ, ಅವರೂ ನನಗೆ ಮೋಸ ಮಾಡಿದ್ದಾರೆ ಎಂದು ಕಾರ್ತಿಕ್ ಆರೋಪಿಸಿದ್ದಾರೆ.

ಆರೋಪ ತಳ್ಳಿ ಹಾಕಿರುವ ದೇವರಾಜೇ ಗೌಡ, ಕಾರ್ತಿಕ್ ಅವರು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹಾಸನದ ಅಭ್ಯರ್ಥಿಯಾಗಿರುವ ಶ್ರೇಯಸ್ ಪಟೇಲ್ ಜೊತೆ ಇದ್ದರು. ಎನ್.ಡಿ.ಎ. ಮೈತ್ರಿಕೂಟದ ಅಭ್ಯರ್ಥಿಗೆ ವಿರುದ್ಧವಾಗಿ ಜೆಡಿಎಸ್ ಆಗಲೀ ಬಿಜೆಪಿ ಆಗಲೀ ವಿಡಿಯೋ ಬಿಡುಗಡೆ ಮಾಡುವುದಿಲ್ಲ ಎಂದಿದ್ದಾರೆ. ಇದರಿಂದ ಲಾಭವಾಗುತ್ತಿರುವುದು ಕಾಂಗ್ರೆಸ್ ಪಕ್ಷಕ್ಕೆ. ಶ್ರೇಯಸ್ ಪಟೇಲ್ ಅವರು ತಮ್ಮ ರಾಜಕೀಯ ಲಾಭಕ್ಕಾಗಿ ವಿಡಿಯೋದಲ್ಲಿರುವ ಮಹಿಳೆಯರ ಮಾನಕ್ಕೆ ಧಕ್ಕೆ ತಂದಿದ್ದಾರೆ ಎಂದೂ ಆರೋಪಿಸಿದ್ದಾರೆ.

ಈ ಪ್ರಕರಣದ ತನಿಖೆಗಾಗಿ ರೂಪಿಸಿರುವ ಎಸ್.ಐ.ಟಿ. ನನಗೆ ನೋಟಿಸ್ ಕಳಿಸುವುದನ್ನು ಕಾಯುತ್ತಿದ್ದೇನೆ. ಆಗ ನಾನು ಪ್ರಮುಖ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ. ಕಾಂಗ್ರೆಸ್ ನಾಯಕರು ಬೇರೆಯವರಿಗಾಗಿ ತೆಗೆದಿರುವ ಹಳ್ಳದಲ್ಲಿ ತಾವೇ ಬೀಳಲಿದ್ದಾರೆ ಎಂದು ಗೌಡ ಹೇಳಿದ್ದಾರೆ.

# ಡಿ.ಕೆ.ಶಿವಕುಮಾರ್ ವಜಾಗೊಳಿಸಲು ಹೆಚ್.ಡಿ.ಕುಮಾರಸ್ವಾಮಿ ಒತ್ತಾಯ

ಬೆಂಗಳೂರು, ಏ. 30 - ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯದ ವಿಡಿಯೋ ಪೆನ್ ಡ್ರೈವ್‌ಗಳನ್ನು ಸಾರ್ವಜನಿಕವಾಗಿ ವಿತರಿಸಿ, ಹೆಣ್ಣು ಮಕ್ಕಳ ಮಾನ ಹರಾಜು ಮಾಡಿರುವ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯ ನಂತರ ಸುದೀರ್ಘ ಪತ್ರಿಕಾಗೋಷ್ಠಿ ನಡೆಸಿದ ಕುಮಾರಸ್ವಾಮಿ, ಈ ಕಾಂಗ್ರೆಸ್ ಸರ್ಕಾರ ಹೆಣ್ಣು ಮಕ್ಕಳಿಗೆ ಗೌರವ ನೀಡುವುದೇ ಆದರೆ, ಮೊದಲು ಈ ವ್ಯಕ್ತಿಯನ್ನು ವಜಾಗೊಳಿಸಿ, ಎಸ್‌ಐಟಿ ತನಿಖೆ ಯಲ್ಲಿ ಇದನ್ನೂ ಸೇರಿಸಿ ಎಂದು ಆಗ್ರಹಿಸಿದರು.

ಪ್ರಜ್ವಲ್ ರೇವಣ್ಣ ಅವರನ್ನು ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ, ಅವರು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ, ಆದರೆ, ಸಿ.ಡಿ. ಮತ್ತು ಪೆನ್ ಡ್ರೈವ್ ಬಿಡುಗಡೆ ಸಂದರ್ಭದಲ್ಲಿ ಸಂತ್ರಸ್ಥ ಹೆಣ್ಣು ಮಕ್ಕಳ ಮುಖವನ್ನಾದರೂ ಮುಚ್ಚಬೇಕಿತ್ತು. ಇದನ್ನೂ ಮಾಡದೆ ಸಾರ್ವಜನಿಕವಾಗಿ ಆ ಹೆಣ್ಣು ಮಕ್ಕಳ ಭವಿಷ್ಯ ಹಾಳು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಇದರಿಂದ ಯಾವುದೇ ಹೆಣ್ಣು ಮಕ್ಕಳು ಆತ್ಮಹತ್ಯೆಗೆ ಶರಣಾದರೆ, ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ ಎಂದೂ ಹೇಳಿದರು.

ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು, ರಾಜ್ಯದಲ್ಲಿ ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಹಿನ್ನಡೆ ತರುವ ಹಾಗೂ ಪ್ರಧಾನಿ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಲು, ಕಾಂಗ್ರೆಸ್ ಮತ್ತು ಶಿವಕುಮಾರ್ ಮಾಡಿರುವ ಕುತಂತ್ರ ಎಂದು ಕಿಡಿಕಾರಿದರು.

ಹಾಸನದ ವಕೀಲ ದೇವರಾಜೇಗೌಡ ಅವರು ಪ್ರಜ್ವಲ್ ವಿರುದ್ಧ ಕಾನೂನು ಸಮರ ನಡೆಸುತ್ತಿದ್ದಾರೆ. ಅವರು ನಮ್ಮ ಪರ ಇಲ್ಲ. ಇಂತಹವರೇ ಶಿವಕುಮಾರ್ ಸಹೋದರರಿಗೆ ಈ ಪೆನ್ ಡ್ರೈವ್ ಎರಡು ತಿಂಗಳ ಹಿಂದೆಯೇ ತಲುಪಿತ್ತು ಎಂದು ಹೇಳಿಕೆ ನೀಡಿದ್ದಾರೆ. ರೇವಣ್ಣ ಅವರ ಕಾರು ಚಾಲಕ ಕಾರ್ತಿಕ್ ಎರಡು ತಿಂಗಳ ಹಿಂದೆ ನನ್ನ ಬಳಿ ಬಂದು ಪೆನ್ ಡ್ರೈವ್‌ನಲ್ಲಿರುವ ನೀಲಿ ಚಿತ್ರಗಳನ್ನು ಮಾಧ್ಯಮಗಳಿಗೆ



ಬಿಡು ಗಡೆ ಮಾಡದಂತೆ ಪ್ರಜ್ವಲ್ ತಡೆಯಾಜ್ಞೆ ತಂದಿದ್ದಾನೆ. ಇದನ್ನು ತೆರವುಗೊಳಿಸುವಂತೆ ಕೋರಿದ್ದರು.

ನಾನು ಪೆನ್ ಡ್ರೈವ್ ತೆಗೆದುಕೊಂಡು ಎಲ್ಲವನ್ನೂ ವೀಕ್ಷಿಸಿದಾಗ ಭಯಾನಕ ದೃಶ್ಯಗಳಿದ್ದವು. ಇದನ್ನು ಯಾರ್ಯಾರಿಗೆ ಕೊಟ್ಟಿದ್ದೀಯಾ ಎಂದು ಕೇಳಿದ್ದೆ. ಆಗ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಸೇರಿ ಕೆಲವು ಕಾಂಗ್ರೆಸ್ಸಿಗರಿಗೆ ನೀಡಿದ್ದೇನೆ ಎಂದು ಕಾರ್ತಿಕ್ ಹೇಳಿದ್ದ ಎಂದು ರಾಜೇಗೌಡರೇ ಬಹಿರಂಗ ಪಡಿಸಿದ್ದಾರೆ. ಅವರು ಹೇಳಿರುವಂತೆಯೇ ಈ ಪೆನ್ ಡ್ರೈವ್‌ಗಳು ಮತ್ತು ಸಿಡಿಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ, ಈ ಮಹಾನ್ ನಾಯಕರು ಚುನಾವಣೆ ಸಂದರ್ಭದಲ್ಲಿ ಬಳಿಕೆ ಮಾಡಿಕೊಂಡಿದ್ದಾರೆ, ಅಷ್ಟೇ ಅಲ್ಲ ನಮ್ಮ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಹೊರಟಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಎಸ್‌ಐಟಿ ತನಿಖೆಯಾಗಲಿ ಸತ್ಯಾಸತ್ಯತೆ ಹೊರಬರಲಿ. ಆದರೆ ಪೆನ್ ಡ್ರೈವ್ ಮತ್ತು ಸಿಡಿಗಳನ್ನು ಸಾರ್ವಜನಿಕವಾಗಿ ಹಂಚುವ ಮೂಲಕ ಸಂತ್ರಸ್ಥೆಯರ ಕುಟುಂಬವನ್ನು ಬೀದಿಗೆ ತಂದಿದ್ದಾರೆ, ಇದು ಒಂದು ದೊಡ್ಡ ಅಪರಾಧ.

ಹೆಣ್ಣು ಮಕ್ಕಳಿಗೆ ಸರ್ಕಾರ ಗೌರವ ಕೊಡುವುದೇ ಆದರೆ, ಶಿವಕುಮಾರ್ ಅವರನ್ನು ವಜಾ ಮಾಡಿ, ಇದನ್ನು ಬಹಿರಂಗ ಪಡಿಸಿದ ಪ್ರಕರಣವನ್ನೂ ತನಿಖೆ ನಡೆಸಿ ಎಂದು ಒತ್ತಾಯಿಸಿದರು.

ರೇವಣ್ಣ ಕಾರು ಚಾಲಕ ಕಾರ್ತಿಕ್, ಏತಕ್ಕೆ ಕೆಲಸ ಬಿಟ್ಟು ಹೋದ, ಅವನು ಏನು ಮಾಡಿದ್ದ ಎಂಬುದೂ ಬಹಿರಂಗಗೊಳ್ಳಬೇಕು, ಅದನ್ನೂ ತನಿಖಾ ವ್ಯಾಪ್ತಿಗೆ ತನ್ನಿ ಎಂದರು. ಹೆಣ್ಣು ಮಕ್ಕಳ ಮಾನ ಹೋಗಿದೆ ಎಂದು ನಮ್ಮ ಮನೆ ಮುಂದೆ ಧರಣಿ ಕೂರಬೇಡಿ. ನಿಮ್ಮ ಶಿವಕುಮಾರ್ ಮನೆ ಮುಂದೆ ಧರಣಿ ಮಾಡಿ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಕುಮಾರಸ್ವಾಮಿ ಕರೆ ನೀಡಿದರು.

## ಪೆನ್‌ಡ್ರೈವ್‌ನಲ್ಲಿ ಮಹಿಳಾ ಅಧಿಕಾರಿಗಳ ವಿಡಿಯೋ : ಸರ್ಕಾರಕ್ಕೆ ತಲೆನೋವು

ಬೆಂಗಳೂರು, ಏ. 30 - ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ಪೆನ್ ಡ್ರೈವ್‌ನಲ್ಲಿ ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳ ಮಹಿಳಾ ಅಧಿಕಾರಿಗಳೂ ಇರುವುದು ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ ಎನ್ನಲಾಗುತ್ತಿದೆ.


ಪ್ರಾಥಮಿಕ ತನಿಖಾ ವರದಿ ಆಧಾರದ ಮೇಲೆ ಈ ಅಂಶ ಬೆಳಕಿಗೆ ಬಂದಿದ್ದು, ಇದರ ಸತ್ಯಾಸತ್ಯತೆ ಅರಿಯಲು ಎಸ್‌ಐಟಿ ತನಿಖಾ ಸಂಸ್ಥೆಗೆ ಮಹಿಳೆಯರನ್ನು ಒಳಗೊಂಡ 18 ಸಿಬ್ಬಂದಿಯನ್ನು ಸರ್ಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ.

ಪೆನ್ ಡ್ರೈವ್ ಹಾಗೂ ಇತರೆ ವಿಡಿಯೋ ತನಿಖೆ ಪರಿಶೀಲನೆಗೆ ಪ್ರತ್ಯೇಕ ತಂಡ ರಚಿಸಲಾಗಿದ್ದು, ಇದರಲ್ಲಿ ಬಹುತೇಕ ಮಹಿಳಾ ಅಧಿಕಾರಿಗಳೇ ಇದ್ದಾರೆ ಎಂದು ಹೇಳಲಾಗುತ್ತಿದೆ. ಪೆನ್‌ಡ್ರೈವ್‌ನಲ್ಲಿ ದೊರೆತಿರುವ ಮಾಹಿತಿಯಂತೆ ಪಿಎಸ್‌ಐ, ಎಇ ಸೇರಿದಂತೆ ಸರ್ಕಾರಿ ಅಧಿಕಾರಿಗಳೇ ಶೇಕಡ 50ರಷ್ಟು ಇದ್ದಾರೆ ಎಂದು ಹೇಳಲಾಗಿದೆ. ವಿಡಿಯೋದಲ್ಲಿರುವ ಮಹಿಳೆಯರ ತನಿಖೆಗೆ ವಿಶೇಷ ಪ್ರಯತ್ನ ಮಾಡಲಾಗುತ್ತಿದೆ ಎಂದು ಗೊತ್ತಾಗಿದೆ.

ವಿಡಿಯೋದಲ್ಲಿ ಮಹಿಳಾ ಅಧಿಕಾರಿಗಳು ಇರುವ ವಿಚಾರದ ಹಿನ್ನೆಲೆ ಅವಲೋಕಿಸಿದರೆ ಕೆಲಸ ಕೊಡಿಸುವ ಮತ್ತು ವರ್ಗಾವಣೆ ವಿಚಾರಗಳು ಈ ದಂಧೆಯ ಭಾಗವಾಗಿರಬಹುದೇ ಎಂಬ ಸಂಶಯ ಮೂಡುತ್ತಿದೆ.

ಈ ಕಾರಣಕ್ಕಾಗಿಯೇ ರಾಜ್ಯದ ವಿವಿಧ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಣಿತ ಮಹಿಳೆಯರನ್ನೊಳಗೊಂಡ ತಂಡ ರಚಿಸಲಾಗಿದೆ. ವಿಶೇಷ ತನಿಖಾ ತಂಡದಿಂದ ತನಿಖೆ ಚುರುಕಾಗುತ್ತಿದ್ದು, ವಿಡಿಯೋ ಪರಿಶೀಲನೆಗೆ ಪ್ರತ್ಯೇಕ ಟೀಂ ಮಾಡಿದ್ದು, ಈಗಾಗಲೇ ತನಿಖೆ ಕಾರ್ಯ ಆರಂಭಿಸಿದೆ.

ಈ ತನಿಖಾ ತಂಡ ಸತ್ಯಾಸತ್ಯತೆಯನ್ನು ಪರಿಶೀಲಿಸಿ ನಂತರ ಎಸ್‌ಐಟಿ ಮುಖ್ಯಸ್ಥರಿಗೆ ವರದಿ ಸಲ್ಲಿಸಲಿದೆ.




## ಪ್ರಜ್ವಲ್ ಪ್ರಕರಣ : ರೇವಣ್ಣಗೆ ನೋಟಿಸ್

ಹಾಸನ, ಏ. 30 - ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿರುವ ಜೆಡಿಎಸ್ ಶಾಸಕ ಹೆಚ್.ಡಿ. ರೇವಣ್ಣ ಅವರಿಗೆ ವಿಶೇಷ ತನಿಖಾ ತಂಡ ನೋಟಿಸ್ ಜಾರಿ ಮಾಡಿದೆ. ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳ ತನಿಖೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ವಿಶೇಷ ತನಿಖಾ ತಂಡವನ್ನು ರಚಿಸಿದೆ. ತಂಡ ತನಿಖೆಯನ್ನು ಆರಂಭಿಸಿದೆ. ಈ ಪ್ರಕರಣದಲ್ಲಿ ರೇವಣ್ಣ ಸಹ ಆರೋಪಿಯಾಗಿದ್ದಾರೆ.

## ಕಾಂಗ್ರೆಸ್ ಏಕೆ ಕ್ರಮ ತೆಗೆದುಕೊಂಡಿಲ್ಲ?: ಷಾ ಪ್ರಶ್ನೆ

ಗೌಹಾತಿ, ಏ. 30 – ಜೆಡಿಎಸ್ ಲೋಕಸಭಾ ಸದಸ್ಯ ಪ್ರಜ್ವಲ್ ರೇವಣ್ಣ ಲೈಂಗಿಕ ಪೀಡನೆ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಏಕೆ ಕ್ರಮ ತೆಗೆದುಕೊಂಡಿಲ್ಲ? ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಪ್ರಶ್ನಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಮಹಿಳೆಯರಿಗೆ ಅವಮಾನವಾಗುವುದನ್ನು ಸಹಿಸುವುದಿಲ್ಲ ಎಂದಿದ್ದಾರೆ. ಈ ಪ್ರಕರಣದಲ್ಲಿ ಎನ್.ಡಿ.ಎ. ಸಹಭಾಗೀಯ ಅಭ್ಯರ್ಥಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ಆರೋಪ ಮಾಡುತ್ತಿದೆ. ಆದರೆ, ಕರ್ನಾಟಕದಲ್ಲಿ ಯಾರ ಸರ್ಕಾರ ಇದೆ? ಅಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ ಇದುವರೆಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಕಾನೂನು ಸುವ್ಯವಸ್ಥೆ ರಾಜ್ಯಕ್ಕೆ ಸಂಬಂಧಿಸಿದ ವಿಷಯ. ನಾವು ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ನಮ್ಮನ್ನು ಪ್ರಶ್ನಿಸುತ್ತಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಇಲ್ಲವೇ ನನ್ನನ್ನು ಪ್ರಶ್ನಿಸುವ ಬದಲು ಅವರು ತಮ್ಮ ಪಕ್ಷದ ಮುಖ್ಯಮಂತ್ರಿಯನ್ನು ಪ್ರಶ್ನಿಸಬೇಕು ಎಂದು ಷಾ ಹೇಳಿದ್ದಾರೆ. ಕರ್ನಾಟಕ ಸರ್ಕಾರ ಏನು ಮಾಡುತ್ತಿದೆ? ಏಕೆ ತನಿಖೆ ನಡೆಸಿಲ್ಲ? ನಾವು ತನಿಖೆಯ ಪರವಾಗಿದ್ದೇವೆ. ರೇವಣ್ಣ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಜೆಡಿಎಸ್ ಸಹ ತಿಳಿಸಿದೆ ಎಂದರು.

ಮಾಧ್ಯಮಗಳಲ್ಲಿ ರೇವಣ್ಣ ಕುರಿತು ಬಂದಿರುವ ವಿಷಯಗಳು ನೋವು ತರುವಂಥದ್ದು, ಯಾವುದೇ ರೀತಿಯಲ್ಲಿ ಈ ಘಟನೆಯನ್ನು ಸಹಿಸುವುದಿಲ್ಲ. ಮಾತೃ ಹಾಗೂ ನಾರಿ ಶಕ್ತಿಗೆ ಅವಮಾನವಾಗುವುದನ್ನು ನಾವು ಸಹಿಸುವುದಿಲ್ಲ ಎಂಬುದು ಬಿಜೆಪಿ ನಿಲುವು ಎಂದೂ ಅಮಿತ್ ಷಾ ಹೇಳಿದ್ದಾರೆ.

## ಪ್ರಜ್ವಲ್ ಪ್ರಕರಣ : ಮಾಹಿತಿ ಕೇಳಿದ ಮಹಿಳಾ ಆಯೋಗ

ನವದೆಹಲಿ, ಏ. 30 – ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಪೀಡನೆ ಆರೋಪಗಳಿಗೆ ಸಂಬಂಧಿಸಿದಂತೆ ಮೂರು ದಿನಗಳಲ್ಲಿ ವರದಿ ನೀಡುವಂತೆ ಕರ್ನಾಟಕ ಪೊಲೀಸರಿಗೆ ರಾಷ್ಟ್ರೀಯ ಮಹಿಳಾ ಆಯೋಗ ತಿಳಿಸಿದೆ. ರಾಜ್ಯ ಡಿ.ಜಿ.ಪಿ.ಗೆ ಪತ್ರ ಬರೆದಿರುವ ಆಯೋಗ, ಆರೋಪಿಯ ಪತ್ತೆಗಾಗಿ ಪ್ರಾಮಾಣಿಕ ಹಾಗೂ ನಿರ್ಣಾಯಕ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದೆ. ಪ್ರಜ್ವಲ್ ಜರ್ಮನಿಗೆ ತೆರಳಿರುವುದಾಗಿ ಹೇಳಲಾಗುತ್ತಿದೆ. ಈ ಘಟನೆಯನ್ನು ಆಯೋಗ ತೀವ್ರವಾಗಿ ಖಂಡಿಸುತ್ತದೆ. ಈ ಘಟನೆಯಿಂದ ತೀವ್ರ ವಿಚಲಿತವಾಗಿದೆ. ಇದರಿಂದ ಮಹಿಳೆಯರ ಸುರಕ್ಷತೆಗೆ ಅಪಾಯವಾಗಿದೆ. ಮಹಿಳೆಯರ ವಿರುದ್ಧ ಅಗೌರವ ಹಾಗೂ ಹಿಂಸೆಯ ಸಂಸ್ಕೃತಿಗೆ ಉತ್ತೇಜನ ನೀಡಿದಂತಾಗಿದೆ ಎಂದೂ ಆಯೋಗ ಹೇಳಿದೆ.

## ಪ್ರಜ್ವಲ್ ವಿರುದ್ಧ ಪೂರ್ಣ ಕಾನೂನು ಬಲ : ಬಿಜೆಪಿ

ನವದೆಹಲಿ, ಏ. 30 – ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಪೀಡನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರ್ಣ ಕಾನೂನು ಬಲ ಬಳಸುವುದಾಗಿ ಬಿಜೆಪಿ ತಿಳಿಸಿದೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಮಹಿಳೆಯರ ವಿರುದ್ಧದ ಅಪರಾಧಗಳನ್ನು ಬಿಜೆಪಿ ಎಳ್ಳಷ್ಟೂ ಸಹಿಸುವುದಿಲ್ಲ ಎಂದಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೆ ಈ ಪ್ರಕರಣದ ಬಗ್ಗೆ ವಾರಗಳು ಹಾಗೂ ತಿಂಗಳುಗಳಿಂದ ತಿಳಿದಿದ್ದರೆ ಅವರು ಇದುವರೆಗೂ ಏಕೆ ಕ್ರಮ ತೆಗೆದುಕೊಂಡು ಆರೋಪಿಯನ್ನು ಬಂಧಿಸಿಲ್ಲ? ಕಾಂಗ್ರೆಸ್ ಪಕ್ಷ ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ದ್ವಿಮುಖ ಮಾನದಂಡ ಹೊಂದಿದೆ ಎಂದೂ ಅವರು ಆರೋಪಿಸಿದ್ದಾರೆ.

# ಪೋಷಕರಿಗೊಂದು ಕಿವಿಮಾತು



ಮಕ್ಕಳಲ್ಲಿ ಕಲಿಕೆ ಆರಂಭವಾಗುವುದು ಅನುಕರಣೆಯಿಂದ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ನಾಣ್ನುಡಿಯಂತೆ ಮಕ್ಕಳಲ್ಲಿ ಅನುಕರಣೆ ಮೊಳಕೆ ಯೊಡೆಯುವಾಗ ಪೋಷಕರು ಮತ್ತು ಹಿರಿಯರು ಮನೆಯಲ್ಲಿ ಮಕ್ಕಳಿರುವುದನ್ನು ಅರಿತು ಯಾವುದೇ ಕಾರ್ಯದಲ್ಲಿ ತೊಡಗುವಾಗ ಬಹಳಷ್ಟು ಎಚ್ಚರವಹಿಸಬೇಕು, ಮಾತನಾಡಬೇಕು, ಮಾತನಾಡುವಾಗಲೂ ಸಹ ಯೋಚಿಸಿ, ತಾಳ್ಮೆಯಿಂದಿರಬೇಕು ಮತ್ತು ನಮ್ಮ ಭಾಷೆ ಮೃದುವಾಗಿರಬೇಕು.

ಇಂದಿನ ತಂತ್ರಜ್ಞಾನದ ಜಗತ್ತಿಗೆ ಬಂದರೆ ಪೋಷಕರಾದ ನಾವು ಮೊಬೈಲ್, ಟಿ.ವಿ ಹಾಗೂ ಅನೇಕ ಸಾಮಾಜಿಕ ಜಾಲತಾಣಗಳಲ್ಲಿ ಸಮಯವನ್ನು ವ್ಯಯ ಮಾಡುತ್ತಿದ್ದೇವೆ. ಆದರೆ, ನಮ್ಮ ಮಕ್ಕಳು ಸಹ ಅದನ್ನೇ ಅನುಸರಿಸುತ್ತಿದ್ದಾರೆ. ಮಕ್ಕಳಿಗೆ ಪೋಷಕರೇ ಮೊದಲ ಆದರ್ಶ ವ್ಯಕ್ತಿಗಳಾಗಿರುವುದರಿಂದ ನಮ್ಮ ಮಕ್ಕಳಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಕಾಣಬೇಕಾದರೆ, ಪೋಷಕರ ಪಾತ್ರ ಬಹುಮುಖ್ಯವಾದದ್ದು. ಈ ತಂತ್ರಜ್ಞಾನದ ಬಳಕೆ ತಪ್ಪು ಎಂಬುದು ನನ್ನ ಮಾತಿನ ಅರ್ಥವಲ್ಲ. ಈ ತಂತಜ್ಞಾನದ ಬಳಕೆಯಿಂದ ನಮ್ಮ ಮಕ್ಕಳು ಭಾವನಾತ್ಮಕವಾಗಿ ಬೆಳೆಯದೇ ಕೃತಕವಾಗಿ ಬೆಳೆಯುತ್ತಿದ್ದಾರೆ. ನಮ್ಮ ಮಕ್ಕಳನ್ನು ನಾವೇ ಭಾವನಾ ಹೀನರನ್ನಾಗಿ ಮಾಡುತ್ತಿದ್ದೇವೆ. ಆದ್ದರಿಂದ ಪೋಷಕರಲ್ಲಿ ಒಂದು ವಿನಂತಿ ಏನೆಂದರೆ ತಂತ್ರಜ್ಞಾನ ಎಷ್ಟೇ ಮುಂದುವರೆದರೂ ನಾವು ಆ ತಂತ್ರಜ್ಞಾನವನ್ನು ಯಾವುದಕ್ಕೆ, ಎಷ್ಟು ಸಮಯ, ಯಾವಾಗ ಯಾವ ಸಂದರ್ಭದಲ್ಲಿ ಬಳಕೆ ಮಾಡಬೇಕು ಎಂದು ಅರಿತು ನಮ್ಮ ಮಕ್ಕಳೊಂದಿಗೆ ಭಾವನಾತ್ಮಕವಾಗಿ ಬೆರೆತು ಅವರನ್ನು ಭಾವನೆಗಳ ಜೊತೆ ಬೆಳೆಸಬೇಕು. ಇಲ್ಲದಿದ್ದರೆ ಅವರು ಭಾವನೆಗಳ ಕುಂಠಿತರಾಗಿ ಸಂಬಂಧಗಳ ಬೆಲೆ, ಪರಿಚಯ ಇಲ್ಲದಂತಾಗುತ್ತಾರೆ.

ಪೋಷಕರು ನಿಮ್ಮ ಒಂದು ಅನುಭವಕ್ಕಾಗಿ ಪ್ರಯೋಗ ಮಾಡಿ ನೋಡಿ. ನಿಮ್ಮ ಮನೆಯಲ್ಲಿ ಎರಡು ಅಥವಾ ಮೂರು ವರುಷದ ಮಗುವಿದ್ದರೆ, ಅದರ ಮುಂದೆ ನೀವು ಒಂದು ಪುಸ್ತಕ - ಪೆನ್ನನ್ನು ತೆಗೆದುಕೊಂಡು ಕೆಲವು ನಿಮಿಷಗಳ ಕಾಲ ಏನಾದರು ಬರೆಯುವುದು, ಚಿತ್ರ ಬಿಡಿಸುವುದು ಮಾಡಿ, ನಂತರ ಆ ಪುಸ್ತಕ ಪೆನ್ನನ್ನು ಅಲ್ಲಿಯೇ ಬಿಟ್ಟು ಆ ಮಗುವಿಗೆ ಕಾಣದಂತೆ ಮರೆಯಾಗಿ ನೀವು ನಿಂತುಕೊಂಡು ಗಮನಿಸಿ, ಆಗ ಆ ಮಗು ನೀವು ಇಟ್ಟ ಪುಸ್ತಕ ಪೆನ್ನನ್ನು ತೆಗೆದುಕೊಂಡು ಗೀಚಲು ಆರಂಭಿಸುತ್ತದೆ. ಅನುಕರಣೆ ಮಕ್ಕಳಲ್ಲಿ ಎಷ್ಟು ಪ್ರಭಾವ ಬೀರುತ್ತದೆ ಎನ್ನುವುದಕ್ಕೆ ಇದು ಒಂದು ಚಿಕ್ಕ ಪ್ರಯೋಗ.

ಪೋಷಕ ಬಂಧುಗಳೇ ನಮ್ಮ ಮಗುವಿನ ಸಕಾರಾತ್ಮಕ, ಲಾಭದಾಯಕ, ಆಸಕ್ತಿದಾಯಕ, ಫಲದಾಯಕ, ಸಾಧನಾತ್ಮಕ ಬೆಳವಣಿಗೆಗೆ ನಾವುಗಳೇ ಭದ್ರ ಬುನಾದಿ ಹಾಕಬೇಕು. ಆದ್ದರಿಂದ ನಾವುಗಳು ಮಕ್ಕಳಿಗೆ ಪ್ರಥಮ ಆದರ್ಶ ವ್ಯಕ್ತಿಗಳಾಗೋಣ. ನಮ್ಮಲ್ಲಿ ಸಕಾರಾತ್ಮಕ ಮನೋಭಾವನೆಗಳನ್ನು ಬೆಳೆಸಿಕೊಳ್ಳೋಣ, ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಂಡು, ನಮ್ಮ ಮಗುವಿಗೆ, ಮಕ್ಕಳಿಗೆ ಉತ್ತಮ ಭವಿಷ್ಯ ನಿರ್ಮಾಣ ಮಾಡೋಣ.

- ಮಂಜುಳ ಎ.ಎನ್.,
ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಬಾಪೂಜಿ ಇನ್ ಸ್ಟಿಟ್ಯೂಟ್ ಆಫ್ ಹೈ- ಟೆಕ್ ಎಜ್ಯುಕೇಶನ್, ದಾವಣಗೆರೆ.

# ಶಾಶ್ವತ ಅಭಿವೃದ್ಧಿ ಮಾಡದೇ ಮೋದಿ ಹೆಸರಲ್ಲಿ ಮತ ಕೇಳುತ್ತಿದ್ದಾರೆ : ಡಾ. ಪ್ರಭಾ



## ಹರಪನಹಳ್ಳಿ ತಾ.ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿರುಸಿನ ಪ್ರಚಾರ

ಹರಪನಹಳ್ಳಿ, ಏ. 30 - ದಾವಣಗೆರೆ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಮತ ನೀಡಿ ಎಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಮತದಾರರಲ್ಲಿ ವಿನಂತಿಸಿಕೊಂಡರು.

ತಾಲ್ಲೂಕಿನ ಹಿರೇಮೇಗಳಗೆರೆ, ಲಕ್ಷ್ಮೀಪುರ, ಶಿಂಗ್ರಿಹಳ್ಳಿ, ರಾಗಿಮಸಲವಾಡ, ಕಂಚಿಕೇರಿ, ಅಡವಿಹಳ್ಳಿ, ಕೂಲಹಳ್ಳಿ, ಬಾಗಳಿ ಸೇರಿದಂತೆ ಮುಂತಾದ ಗ್ರಾಮಗಳಲ್ಲಿ ಚುನಾವಣಾ ಪ್ರಚಾರದಲ್ಲಿ ಮಾತನಾಡಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದಿಂದ 5 ಬಾರಿ ಸಂಸದರಾಗಿ ಆಯ್ಕೆಯಾಗಿರುವ ಬಿಜೆಪಿಯವರು, ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಕೇವಲ ಮೋದಿ ಹೆಸರಲ್ಲಿ ಮತ ಕೇಳುತ್ತಿದ್ದಾರೆ ಎಂದು ದೂರಿದರು.

ನಾನು ಕಳೆದ ಹಲವಾರು ವರ್ಷಗಳಿಂದ ಎಸ್‌ಎಸ್ ಕೇರ್ ಟ್ರಸ್ಟ್ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದು, ಟ್ರಸ್ಟ್ ಮೂಲಕ ಅನೇಕ ಬಡವರಿಗೆ ಮಹಿಳೆಯರಿಗೆ ಸಹಾಯ ಮಾಡಿದ್ದೇನೆ, ಇನ್ನಷ್ಟು ನಿಮ್ಮ ಸೇವೆ ಮಾಡಲು ನನಗೆ ಒಂದು ಅವಕಾಶ ಕೊಡಿ ಎಂದು ಮನವಿ ಮಾಡಿಕೊಂಡರು.

ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ಪಕ್ಷದಲ್ಲಿ ಸಣ್ಣ-ಪುಟ್ಟ ಭಿನ್ನಾಭಿಪ್ರಾಯ, ಮುನಿಸುಗಳನ್ನು ಮರೆತು ಒಗ್ಗಟ್ಟಾಗಿ ಎಲ್ಲರೂ ಕಾಂಗ್ರೆಸ್ ಗೆಲುವಿಗೆ ಶ್ರಮಿಸಬೇಕೆಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದೆ, ಬಿಜೆಪಿಯವರ ಮಾತಿಗೆ ಮರುಳಾಗದೇ ಎಲ್ಲಾರೂ ಹಸ್ತ ಗುರುತಿಗೆ ಮತ ನೀಡಿ ಎಂದು ಮನವಿ ಮಾಡಿಕೊಂಡರು.

ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಅರಸೀಕೆರೆ ಎನ್. ಕೊಟ್ರೇಶ್ ಮಾತನಾಡಿ, ಕೇಂದ್ರದಲ್ಲಿ ಹತ್ತು ವರ್ಷ ಆಡಳಿತ ನಡೆಸಿದ ಬಿಜೆಪಿ ಬಡವರಿಗೆ ಅನುಕೂಲವಾಗುವಂತಹ ಯಾವುದೇ ಯೋಜನೆ ಜಾರಿ ಮಾಡಿಲ್ಲ, ಆದರೆ ಕಾಂಗ್ರೆಸ್ ರಾಜ್ಯದಲ್ಲಿ ನುಡಿದಂತೆ ನಡೆದಿದೆ ಎಂದರು.

ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ, ಮಹಿಳೆಯರಿಗೆ ವರ್ಷಕ್ಕೆ ಒಂದು ಲಕ್ಷ ಹಣ ಸೇರಿದಂತೆ ಪ್ರಣಾಳಿಕೆಯಲ್ಲಿ ನೀಡಿದ ಅನೇಕ ಭರವಸೆಗಳನ್ನು ಈಡೇರಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಮುಖಂಡ ಸಿನಿಮಾ ರಾಜಣ್ಣ, ಆಲದಳ್ಳಿ ಷಣ್ಮುಖಪ್ಪ, ಕೋಡಿ ಭೀಮಣ್ಣ, ಹಲಗೇರಿ ಮಂಜಪ್ಪ, ಕಂಚಿಕೇರಿ ಜಯಲಕ್ಷ್ಮಿ, ಸುಷ್ಮಾ ಪಾಟೀಲ್, ಶಾಂತರೆಡ್ಡಿ, ಮತ್ತೂರು ಬಸವರಾಜ, ಉದಯಶಂಕರ, ಪ್ರಸಾದ, ನಾಗರಾಜ, ಬಸವರಾಜ ಸೇರಿದಂತೆ ಇತರರಿದ್ದರು.

# ಎರಡೂ ರಾಷ್ಟ್ರೀಯ ಪಕ್ಷಗಳನ್ನು ತಿರಸ್ಕರಿಸಿ

**(1ನೇ ಪುಟದಿಂದ)** ಗೊತ್ತಿದ್ದು ಮತ ಹಾಕಬೇಕಾ ಎಂದು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ಹೇಳಿದರು.

ಅಭಿವೃದ್ಧಿ ತರಲ್ಲ, ಸೇವೆ ಮಾಡಲ್ಲ, ಸೌಲಭ್ಯ ಕೊಡಲ್ಲ ಎಂಬುದು ಗೊತ್ತಿದ್ದರೂ ನೀವ್ಯಾಕೆ ಮತ ನೀಡಬೇಕು. ಸತ್ಯ ನಮ್ಮ ಕಣ್ಣೆದುರಿಗೆ ಇದೆ. ಇಂಥವರಿಗೆ ಮತ ಹಾಕಿದರೆ ನಮಗೆ ನಾವು ಮಾಡಿಕೊಂಡ ವಿಶ್ವಾಸ ದ್ರೋಹ, ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹ ಆಗುತ್ತದೆ ಎಂದರು.

ಮರಡಿ ಗ್ರಾಮದ ಮುಖಂಡರಾದ ಟಿ. ಆರ್. ನಾಗರಾಜ್, ರುದ್ರೇಶ್, ರಂಗಪ್ಪ, ಸತೀಶ, ಎಂ. ಬಿ. ಮನು, ರಮೇಶ್, ಪರಶುರಾಮ್, ಎಸ್. ಆರ್. ರುದ್ರೇಶ್, ಗುಡ್ಡಪ್ಪ, ಯೋಗೇಶ್, ನಾಗರಾಜ್ ಮತ್ತಿತರರು ಹಾಜರಿದ್ದರು.

ತಣಿಗೆರೆಯಲ್ಲಿಯೂ ಪ್ರಚಾರ ನಡೆಸಿದ ವಿನಯ್ ಕುಮಾರ್ ಅವರು, ಅಭಿವೃದ್ಧಿ ಮಾಡುವ ಮನಸ್ಸಿಲ್ಲದಿದ್ದರೂ ಎರಡು ಪಕ್ಷಗಳು ತನ್ನ ಮನೆತನಕ್ಕೆ ಟಿಕೆಟ್ ತಂದಿರುವುದು ತನ್ನ ಆಸ್ತಿ ಉಳಿಸಿಕೊಳ್ಳಲು ಎಂದು ಆರೋಪಿಸಿದರು.

ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿಯೂ ದೊಡ್ಡ ಕೈಗಾರಿಕೆಗಳಿಲ್ಲ, ಅತ್ಯುನ್ನತ ವಿದ್ಯಾ ಸಂಸ್ಥೆಗಳಿಲ್ಲ. ಎರಡು ಮನೆತನದ ವರ ಆಚೆಯವರು ಶಾಸಕರು, ಸಂಸದರಾಗಬೇಕು. ತಣಿಗೆರೆ ಗ್ರಾಮಕ್ಕೆ ನಾಲ್ಕೈದು ಬಾರಿ ಬಂದು ಹೋಗಿದ್ದೇನೆ. ನನ್ನಂಥ ಯುವಕನನ್ನು ಲೋಕಸಭೆಗೆ ಕಳುಹಿಸಿಕೊಡಿ ಎಂದು ಮನವಿ ಮಾಡಿದರು.

ಈ ವೇಳೆ ತಣಿಗೆರೆ ಗ್ರಾಮದ ಮುಖಂಡರಾದ ಸುನೀಲ್, ಶ್ರೇಯಸ್, ಈಶಪ್ಪ ದೊಡ್ಮನೆ, ರಾಕೇಶ, ಟಿ. ಸಿ. ಹನುಮಂತಪ್ಪ, ಎ. ಕೆ. ಶಿವಕುಮಾರ್, ರಂಗಸ್ವಾಮಿ, ಸುರೇಶ್ ಮತ್ತಿತರರು ಹಾಜರಿದ್ದರು.

# ಉಪ್ಪಾರ ಸಮಾಜದ ಮುಖಂಡರಿಂದ ಕಾಂಗ್ರೆಸ್‌ಗೆ ಬೆಂಬಲ




ದಾವಣಗೆರೆ, ಏ.30- ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಉಪ್ಪಾರ ಸಮಾಜದ ಮುಖಂಡರು ಸಭೆ ನಡೆಸಿ, ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಸೂಚಿಸಿ, ಹೆಚ್ಚು ಮತಗಳಿಂದ ಗೆಲ್ಲಿಸುವುದಾಗಿ ಹೇಳಿ ದರು. ಈ ವೇಳೆ ಕೆಪಿಸಿಸಿಯ ಪ್ರಧಾನ ಕಾರ್ಯ ದರ್ಶಿ ಡಾ. ಉಮೇಶ್ ಬಾಬು, ಎಸ್. ಬಸವರಾಜಪ್ಪ ತುರ್ಚಘಟ್ಟ, ಕೆಪಿಸಿಸಿ ಓಬಿಸಿಯ ಉಪಾಧ್ಯಕ್ಷ ನಲ್ಕುಂದ ಹಾಲೇಶ್, ಮಾಗಾನಹಳ್ಳಿ ರಾಜಪ್ಪ, ಗಿರೀಶ್, ರಾಜಣ್ಣ, ದೇವೇಂದ್ರಪ್ಪ ಹೊಸಹಳ್ಳಿ, ಬಾತಿ ಸಿದ್ಧಲಿಂಗಪ್ಪ ಮತ್ತು ಸಮಾಜದ ಅನೇಕ ಮುಖಂಡರು ಇದ್ದರು.

# ರೈತರ ಶ್ರೇಯೋಭಿವೃದ್ಧಿಗೆ ಪ್ರಭಾ ಗೆಲ್ಲಲಿ

**(1ನೇ ಪುಟದಿಂದ)** ನೀಡುವ ಮೂಲಕ ಡಾ.ಪ್ರಭಾ ಮಲ್ಲಿಕಾರ್ಜುನ್ ಮಹಿಳೆಯರಿಗೆ ಆಶಾಕಿರಣವಾಗಿದ್ದಾರೆ ಎಂದು ವಿವರಿಸಿದರು.

ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳ ಅಭೂತಪೂರ್ವ ಯಶಸ್ಸಿ ನಿಂದಾಗಿ ಬಿಜೆಪಿಗೆ ನಡುಕ ಶುರುವಾಗಿದೆ. ಲೋಕಸಭಾ ಚುನಾವಣೆ ಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿ ಕಾರ್ಜುನ್ ಗೆಲುವು ಶತಸ್ಸಿದ್ಧವಾಗಿದೆ. ಮುಜುಗರದಿಂದ ಪಾರಾಗಲು ಬಿಜೆಪಿಯವರು ಇಲ್ಲ-ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಆರ್ಥಿಕವಾಗಿ ಸುಭದ್ರವಾಗಿದೆ. ಕುಡಿಯುವ ನೀರು ಪೂರೈಕೆಗೆ ಹೊನ್ನಾಳಿ ಕ್ಷೇತ್ರಕ್ಕೆ ಮೂರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ನೀತಿ ಸಂಹಿತೆಯ ಕಾರಣದಿಂದಾಗಿ ಇನ್ನೂ ಎರಡು ತಿಂಗಳುಗಳ ಕಾಲ ಬೇರೆ ಅಭಿವೃದ್ಧಿ ಕಾಮಗಾರಿಗಳನ್ನು ಚಾಲನೆ ಮಾಡುವಂತಿಲ್ಲ. ಆದ್ದರಿಂದ, ಮುಂದಿನ ದಿನಗಳಲ್ಲಿ ಹೊನ್ನಾಳಿ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಪುನರಾರಂಭಗೊಳ್ಳಲಿದೆ ಎಂದು ತಿಳಿಸಿದರು.

ಚನ್ನಗಿರಿಯಲ್ಲಿ 2017ರ ಫೆಬ್ರವರಿಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಸಮಾರಂಭದಲ್ಲಿ ಸಿರಿಗೆರೆ ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಜಾರಿಗೊಳಿಸಲು ಆಗ್ರಹಿಸಿದ್ದರು. ಆ ಮೇರೆಗೆ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯ 680 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದರು. ಆದರೆ, ನಂತರ ಬಂದ ಸರಕಾರ ಯೋಜನೆ ನಮ್ಮದೇ ಎಂದು ಬಿಂಬಿಸಿದವು. ಇದೀಗ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಶೇ.99ರಷ್ಟು ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಡಾ.ಸ್ವಾಮೀಜಿ ಸಾನಿಧ್ಯದಲ್ಲಿ, ಡಾ.ಪ್ರಭಾ ಮಲ್ಲಿಕಾರ್ಜುನ್ - ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಇತರೆ ನಾಯಕರ ಸಮ್ಮುಖದಲ್ಲಿ ಯೋಜನೆ ಲೋಕಾರ್ಪಣೆ ಸಮಾರಂಭ ನಡೆಸುತ್ತೇವೆ ಎಂದು ಹೇಳಿದರು.

ಮಾಜಿ ಶಾಸಕ ಡಾ.ಡಿ.ಬಿ. ಗಂಗಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಮುಖಂಡರಾದ ಬಿ. ಸಿದ್ಧಪ್ಪ, ಎ.ಆರ್. ಚಂದ್ರಶೇಖರಪ್ಪ, ಎಚ್.ಎ. ಗದ್ದಿಗೇಶ್, ಎಸ್.ಎಚ್. ಕೃಷ್ಣಮೂರ್ತಿ, ಆರ್. ನಾಗಪ್ಪ ಇತರರು ಮಾತನಾಡಿದರು. ಕಾಂಗ್ರೆಸ್ ಮುಖಂಡರು ಇದ್ದರು.

## ಬೇಡಿಕೆ ಶೇ.8ರಷ್ಟು ಹೆಚ್ಚಳ

**(1ನೇ ಪುಟದಿಂದ)** ಜೊತೆಗೆ ರಿಸರ್ವ್ ಬ್ಯಾಂಕ್ ಸಹ ಬಂಗಾರ ಖರೀದಿಸಿರುವುದು ಬೇಡಿಕೆ ಹೆಚ್ಚಾಗಲು ಕಾರಣವಾಗಿದೆ ಎಂದು ಜೈನ್ ತಿಳಿಸಿದ್ದಾರೆ. 2023ರಲ್ಲಿ ರಿಸರ್ವ್ ಬ್ಯಾಂಕ್ 16 ಟನ್ ಬಂಗಾರ ಖರೀದಿಸಿತ್ತು. ಈ ವರ್ಷದ ಮೊದಲ ಮೂರು ತಿಂಗಳಲ್ಲಿ 19 ಟನ್ ಖರೀದಿಸಿದೆ. ಇನ್ನಷ್ಟು ಬಂಗಾರ ಖರೀದಿಸುವುದಾಗಿ ರಿಸರ್ವ್ ಬ್ಯಾಂಕ್ ಇಂಗಿತ ವ್ಯಕ್ತಪಡಿಸಿದೆ ಎಂದು ಜೈನ್ ಹೇಳಿದ್ದಾರೆ.

## 14 ಉತ್ಪನ್ನಗಳಿಗೆ ತಡೆ

**(1ನೇ ಪುಟದಿಂದ)** ವಿರುದ್ಧ ತಪ್ಪು ದಾರಿಗೆಳೆಯುವ ಜಾಹೀರಾತುಗಳನ್ನು ನೀಡಿದ ಪ್ರಕರಣ ದಾಖಲಿಸಲಾಗಿದೆ.

ಪತಂಜಲಿ ಆಯುರ್ವೇದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರ ನಿಷ್ಕ್ರಿಯವಾಗಿದೆ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ನಂತರ ಪ್ರಾಧಿಕಾರ ಕ್ರಮಕ್ಕೆ ಮುಂದಾಗಿದೆ.

# ನಮ್ಮ ಮತ ನಮಗೇ ಹಿತ

ಬನ್ನಿರಿ... ಬನ್ನಿರಿ.....ಬನ್ನಿರಿ......
ಮತದಾನ ಮಾಡೋಣ ಬನ್ನಿರಿ
ಪ್ರಜಾಪ್ರಭುತ್ವ ದೇಶವು ನಮ್ಮದು...
ಜನ ಸೇವಕರ ಆಯ್ಕೆ ನಮ್ಮೆಲ್ಲರದು!

ನಮ್ಮ ಹಕ್ಕನ್ನು ಉಳಿಸೋಣ ಬನ್ನಿರಿ
ಆದ್ಯ ಕರ್ತವ್ಯ ವದು ಮರೆಯದಿರಿ....
ದೇಶಕ್ಕಾಗಿ ನಿಷ್ಠೆಯನ್ನು ಮೆರೆಸೋಣ
ಮತದಾನವನ್ನು ತಪ್ಪಿಸದೇ ಮಾಡೋಣ!

ದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ..
ಒಂದೊಂದು ಮತವು ಬಹು ಅಮೂಲ್ಯವು
ಮನೆಯಲ್ಲಿ ಕೂರದೇ ಬೇಗ ಹೊರಡಿರಿ
ಮತಗಟ್ಟೆಗೆ ಧಾವಿಸಿ ಮತ ಚಲಾಯಿಸಿರಿ

ನಿಮ್ಮ ಮತವಿರಲೆಂದೂ ದೇಶದ ಹಿತಕ್ಕಾಗಿ
ದೇಶದ ಹಿತವಲ್ಲವೇ ನಮಗೆಂದೂ ವರವು
ಮತದಾನದ ಮಹತ್ವವನ್ನು ಎಲ್ಲೆಡೆಯೂ ಸಾರಿರಿ
ಮತದಾನ ಮಾಡಲು ಅರಿವನ್ನು ಮೂಡಿಸಿರಿ

ದೇಶದ ಹಿತ ಬಯಸುವ ನಾಯಕರಿಗಾಗಿ
ಕರ್ತವ್ಯ,ನಿಷ್ಠೆ, ಪ್ರಾಮಾಣಿಕ ವ್ಯಕ್ತಿಗಾಗಿ...
ಮತವನ್ನು ಹಾಕೋಣ ನಾವು ದೇಶದೇಳ್ಗೆಗಾಗಿ
ಶಾಂತಿ ನೆಮ್ಮದಿಯ ನಮ್ಮೆಲ್ಲರ ಹಿತದ ಬಾಳಿಗಾಗಿ

ಬನ್ನಿರಿ.... ಬನ್ನಿರಿ.... ಬನ್ನಿರಿ ಎಲ್ಲರೂ
ಮತದಾನವನ್ನು ಮಾಡೋಣ ಬನ್ನಿರಿ
ಬಿರು ಬಿಸಿಲಿನ ತಾಪವು ಅಧಿಕವಾಗಿಹುದು
ಮತದಾನವನ್ನು ಬೇಗನೆ ಮಾಡೋಣ ಬನ್ನಿರಿ

- ವೀಣಾ ಕೃಷ್ಣಮೂರ್ತಿ, ದಾವಣಗೆರೆ

# ನಗರದಲ್ಲಿ ಇಂದು ಸಂಸದ ಜಿ.ಎಂ.ಸಿದ್ದೇಶ್ವರ ವಿರುದ್ಧ ಮಹಿಳಾ ಕಾಂಗ್ರೆಸ್ ಪ್ರತಿಭಟನೆ

ಕುಂದವಾಡ ಕೆರೆಯ ಅಭಿವೃದ್ಧಿ ಮಾಡದಿರುವ ಸಂಸದ ಜಿ.ಎಂ.ಸಿದ್ದೇಶ್ವರ ಅವರ ವಿರುದ್ಧ ಮಹಿಳಾ ಕಾಂಗ್ರೆಸ್ ವತಿಯಿಂದ ಇಂದು ಪ್ರತಿಭಟನೆ ನಡೆಯಲಿದೆ. ಬೆಳಿಗ್ಗೆ 8.30 ಗಂಟೆಗೆ ಕುಂದುವಾಡ ಕೆರೆ ಏರಿ ಮೇಲೆ ಜಿಲೇಬಿ ಮಾಡುವ ಮೂಲಕ ಪ್ರತಿಭಟನೆ ನಡೆಸಲಿದ್ದು, ಪ್ರತಿಭಟನೆಯ ನೇತೃತ್ವವನ್ನು ಮಹಿಳಾ ಕಾಂಗ್ರೆಸ್ ನ ಅನಿತಾಬಾಯಿ, ಮಂಜಮ್ಮ, ಮಂಗಳಮ್ಮ ವಹಿಸುವರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ಶ್ರೀ ವಾಣಿ ಶಿವಣ್ಣ ಮತ್ತು ಕುಟುಂಬವರ್ಗದವರು, ದಾವಣಗೆರೆ ಇವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

ಸೈಟುಗಳು ಮಾರಾಟಕ್ಕಿವೆ
1)ನೂತನ್ ಕಾಲೇಜ್ ಹಿಂಭಾಗ 25x40 West
2) ಡಾಲರ್ಸ್‌ಕಾಲೋನಿಯಲ್ಲಿ 40x40 South
3) S.S. 'B' Block ನಲ್ಲಿ 20x40 South
4) ಬನಶ್ರೀ ಲೇಔಟ್‌ನಲ್ಲಿ 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

Property Hub
• EC
• E-swathu
• Building Licence
• Khatha Change
96118 66449

ಮನೆ ಮಾರಾಟಕ್ಕಿದೆ
ಸುಮಾರು 5 ಚದರ ಅಡಿಯಲ್ಲಿರುವ ಸುವ್ಯವಸ್ಥಿತವಾದ ಕೆಳ ಹಾಗೂ ಮೇಲ್ಮನೆ ಇರುವ ಮನೆಯು ಮಾರಾಟಕ್ಕೆ ಇದೆ. ಖರೀದಿಸುವ ಆಸಕ್ತರು ಕರೆ ಮಾಡಬಹುದು.
98803 00615

ಬೋರ್ ವೆಲ್ ಪಾಯಿಂಟ್
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ.
97436 54365, 86609 98651

ಬೇಕಾಗಿದ್ದಾರೆ
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ ಪಿಜೆ ಬಡಾವಣೆ ದಾವಣಗೆರೆ.

ಬಾಡಿಗೆಗೆ
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಮೊದಲನೇ ಮಹಡಿ - 4000 ಅಡಿ
2. ಎರಡನೇ ಮಹಡಿ - 4000 ಅಡಿ
3. Terrace Floor - 4000 ಅಡಿ
4. Basement - 4000 ಅಡಿ
ಸಂಪರ್ಕಿಸಿ : ಮೊ.
94480 28103

ಕರ್ನಾಟಕ ಗೃಹಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ
50x80, 50x80 North
ಅಕ್ಕ-ಪಕ್ಕ, 40x60, 40x60 South ಅಕ್ಕ-ಪಕ್ಕ, 50x80 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಸಂಘ ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್‌ಗಳ, GST & INCOME TAX ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
ಮೊ. 94838 62779

ಬೇಕಾಗಿದ್ದಾರೆ
ಸುಬ್ರಹ್ಮಣ್ಯ ಗ್ಯಾಸ್ ಏಜೆನ್ಸಿ, #961/1, 1ನೇ ಮೇನ್, 1ನೇ ಕ್ರಾಸ್, ಕೆಟಿಜೆ ನಗರ, ಸಿಲಿಂಡರ್ ಡೆಲಿವರಿ ಮಾಡುವ ಹುಡುಗರು ಬೇಕಾಗಿದ್ದಾರೆ. ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು.
ಭೇಟಿಯ ಸಮಯ ಬೆಳಿಗ್ಗೆ 11 ರಿಂದ 1 ಗಂಟೆ, ಸಂಜೆ 4 ರಿಂದ 6 ಗಂಟೆ.
08192254121, 08192254098

ವಧು ಬೇಕಾಗಿದೆ
44 ವರ್ಷದ ಫೈನಾನ್ಸ್ ಮಾಡುತ್ತಿರುವ ವರನಿಗೆ ಎರಡನೇ ಮದುವೆಗೆ ವಧು ಬೇಕಾಗಿದೆ.
89047 54519
86184 74909

ಬಿಸಿನೆಸ್ ಅವಕಾಶ
ಕೇವಲ ರೂ.3900/- ನಲ್ಲಿ ನಿಮ್ಮ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿ ಮತ್ತು ಯಶಸ್ಸು ಪಡೆಯಿರಿ. ನಿಮ್ಮ ಯಶಸ್ಸು ನಮ್ಮ ಬದ್ಧತೆಯಾಗಿದೆ.
ಈ ಅವಕಾಶ 5 ಜನರಿಗೆ ಮಾತ್ರ.
98445 52867

ಬೇಕಾಗಿದ್ದಾರೆ
ಕೌಂಟರ್-ಕ್ಲೀನಿಂಗ್ ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
ಮೊ. : 91138 57837

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಸೈಟು ಮಾರಾಟಕ್ಕೆ
ತುಂಗಭದ್ರಾ ಬಡಾವಣೆ, ಹೊಸ ಕುಂದುವಾಡ, ಕೆ.ಹೆಚ್.ಬಿ. ಕಾಲೋನಿ, ರಿಂಗ್ ರೋಡ್‌ನಿಂದ ಐದು ರಸ್ತೆ ಸೇರುವ ಜಡ್ಜ್ ಮನೆ ರಸ್ತೆಯ ದಕ್ಷಿಣ ದಿಕ್ಕಿಗೆ ಕಾರ್ನರ್ ನಿಂದ 2ನೇ ಸೈಟು ಹೆಚ್.ಐ.ಜಿ. ||-116, 50x80, ಅಳತೆ ಮಾರಾಟಕ್ಕೆ ಇದೆ.
98440 11532, 63606 75885

ಬೇಕಾಗಿದ್ದಾರೆ
ಪಾರ್ಟ್ ಟೈಂ ಅಥವಾ ಫುಲ್ ಟೈಂ ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಮೊ. 91108 98377

ಮನೆ ಬಾಡಿಗೆಗೆ ಇದೆ
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

ಪ್ಲಾಟ್ ಲೀಜ್‌ಗೆ ಇದೆ
ದಾವಣಗೆರೆಯ ವಿದ್ಯಾನಗರದ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಪ್ಲಾಟ್ ಲೀಜ್‌ಗೆ ಇವೆ.
ಸಂಪರ್ಕಿಸಿ.
99807 28533

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಪಾಪ್ಯುಲರ್ ಸೆಕ್ಯೂರಿಟಿ & ಅಲೈಡ್ ಸರ್ವೀಸ್, ದಾವಣಗೆರೆ.
90362 37886

ಬೇಕಾಗಿದ್ದಾರೆ
ಬಿ.ಎಸ್ಸಿ., ಬಿ.ಇಡಿ. (ವಿಜ್ಞಾನ, ಗಣಿತ)
ಬಿ.ಎ., ಬಿ.ಇಡಿ. (ಕನ್ನಡ, ಇಂಗ್ಲೀಷ್, ಹಿಂದಿ, ಸಮಾಜ)
ಹಾಗೂ ಬಿಎಸ್ಸಿ., ಬಿ.ಎ. ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

Finance Advisor
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
78923 29921, 96326 11005

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

WANTED
Security guard Wanted Davangere.
Contact :
88846 48954

ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ
ಗಂಡ-ಹೆಂಡತಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 25,000 ರೂ. ಇಬ್ಬರಿಂದ ರೂಂ ಮತ್ತು ಗ್ಯಾಸ್ ಉಚಿತ.
97400 98047

ಬೇಕಾಗಿದ್ದಾರೆ
* ಸ್ಪೀಡ್ ಕನ್ನಡ ಟೈಪಿಸ್ಟ್ - 05
* ಟೆಲಿಕಾಲರ್ಸ್ - 10
ಸಂಬಳ 10,000-15,000 ಸಾವಿರ. ಸಂಪರ್ಕಿಸಿ :
82969 57816

1BHK ಮನೆ ಬಾಡಿಗೆಗೆ ಇದೆ
ಕೆ.ಬಿ. ಬಡಾವಣೆಯ ಕಿರುವಾಡಿ ಲೇಔಟ್ ನಲ್ಲಿ ಒಂದು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ
63616 62669

ಬೇಕಾಗಿದ್ದಾರೆ
ಆಫೀಸ್ ಬಾಯ್ ಹಾಗೂ ಟ್ಯಾಲಿ ಅನುಭವವುಳ್ಳ ಅಕೌಂಟೆಂಟ್ ಬೇಕಾಗಿದ್ದಾರೆ.
ಸಂಪರ್ಕಿಸಿ.
98867 09334, 99646 40494

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ
ಲಾಡ್ಜ್ ನಲ್ಲಿ ಹಗಲು ಪಾಳ್ಯದಲ್ಲಿ ಕೆಲಸ ಮಾಡಲು ಸೂಪರ್ ವೈಸರ್ ಹಾಗೂ ರಾತ್ರಿ ಮತ್ತು ಹಗಲು ಪಾಳ್ಯದಲ್ಲಿ ಕೆಲಸ ಮಾಡಲು ರೂಂ ಬಾಯ್ಸ್ ಬೇಕಾಗಿದ್ದಾರೆ
63639 54459

ಮೆಡ್‌ಕ್ಯೂರ್
ಔಷಧಿ ಅಂಗಡಿಯಲ್ಲಿ ಅನುಭವವುಳ್ಳ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ಶಕ್ತಿ ಗ್ಯಾಸ್ ಆಫೀಸ್ ಹತ್ತಿರ 60 ಅಡಿ ರೋಡ್, ನಿಟ್ಟುವಳ್ಳಿ, ದಾವಣಗೆರೆ.
ಸಂಪರ್ಕಿಸಿ :
73534 14917


Bruit Academy
IIT FOUNDATION (JEE)
FROM 5th Std to 10th Std
( CBSE, ICSE, IGCSE)
NIJALINGAPPA BADAVANE
96201 53806

REQUIRED
Lady candidate for office work & Accountant / GST
PJ Extension, Davangere.
99006 66122

ಮೆಡಿಕಲ್ ಶಾಪ್ ಮಾರಾಟಕ್ಕಿದೆ
ರ‍್ಯಾಕ್ಸ್, ಕೌಂಟರ್ ಟೇಬಲ್ ಸಮೇತ ಮಾರಾಟಕ್ಕಿದೆ.
84313 57744
98443 79910

SALES EXECUTIVES WANTED
Male / Female
Good Communication Skill
Attractive Salary
Kabbur Furnitures
Beside Sultan Diamonds & Gold Showroom
P.B Road, Davanagere.
8951916300

Change of Name
I Karibasappa D. (old Name) S/o Devendrappa Resident of Holesirigere Village & Post, Harihara (T.) Davangere (D), I have Changed my Name to Karunakar D. Vide affidavit before Davangere Notary all the future Transactions will be in the new name as under Signed
Karunakar D.

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಮನೆಯಿಂದಲೇ ಆದಾಯ ಗಳಿಸಿರಿ
ಗೃಹಿಣಿಯರು, ಪುರುಷರು, ವಿದ್ಯಾರ್ಥಿಗಳು, ಉದ್ಯೋಗಿಗಳು, ನಿರುದ್ಯೋಗಿಗಳು, ವ್ಯಾಪಾರಸ್ಥರು ಹಾಗೂ 18 ವರ್ಷ ಮೇಲ್ಪಟ್ಟ ಎಲ್ಲರೂ ಆದಾಯ ಗಳಿಸಿರಿ.
8496957469, 9620983691

TEACHERS WANTED
B.Sc, B.Ed - 2. BA, B.Ed (English) - 2. Hindi, B.Ed - 1. D.Ed - 2.
Shree Taralabalu HPS English Medium School,
21 Ward, Basapura, Davanagere. Contact :
94488 03836, 95912 85527
81977 96810

ಸೊಳ್ಳೆ ಮೆಶ್ ಹಾಕಲಾಗುವುದು
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

# ಬ್ಲಾಕ್‌ಮೇಲ್ ಮೂಲಕ ಮತ ಕೇಳುತ್ತಿರುವ ಕಾಂಗ್ರೆಸ್ : ವಸಂತ್ ಕುಮಾರ್

ದಾವಣಗೆರೆ, ಏ. 30- ಅಭಿವೃದ್ಧಿ ಕೆಲಸಗಳನ್ನು ಜನರ ಮುಂದಿಟ್ಟು ಮತ ಕೇಳಲು ಅರ್ಹತೆ ಇಲ್ಲದ ಕಾಂಗ್ರೆಸ್, ಮತದಾರರನ್ನು ಬ್ಲಾಕ್‌ಮೇಲ್ ಮಾಡುವ ಮೂಲಕ ಚುನಾವಣೆಯಲ್ಲಿ ಗೆಲ್ಲುವ ತಂತ್ರ ಅನುಸರಿಸುತ್ತಿದೆ. ಆದರೆ, ಅದು ಫಲ ನೀಡುವುದಿಲ್ಲ ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತ ಕುಮಾರ್ ಆರೋಪಿಸಿದರು.

ನಗರದ ಬಿಜೆಪಿ ಚುನಾವಣಾ ಕಚೇರಿಯಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕದಿದ್ದರೆ, ಎಲ್ಲ ಗ್ಯಾರಂಟಿಗಳು, ಬಿಪಿಎಲ್ ಕಾರ್ಡ್ ಹಾಗೂ ಸರ್ಕಾರಿ ಸೌಲಭ್ಯಗಳನ್ನು ರದ್ದು ಮಾಡುವುದಾಗಿ ಕಾಂಗ್ರೆಸ್ಸಿಗರು ಪ್ರಚಾ ರದ ವೇಳೆ ಸಾರ್ವಜನಿಕರನ್ನು ಬೆದರಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ಅಭ್ಯರ್ಥಿಯು ಸಚಿವ ರಾಗಿರುವ ತಮ್ಮ ಪತಿಯ ಅಧಿಕಾರ ಬಳಸಿಕೊಂಡು, ಸರ್ಕಾರಿ ಅಧಿಕಾರಿ ಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಅಧಿಕಾರಿಯೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಆರೋಗ್ಯ ಸಚಿವರ ಭಾವಚಿತ್ರ ಇರುವ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿದ್ದಾರೆ. ಈ ಬಗ್ಗೆ ಈಗಾಗಲೇ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಹೇಳಿದರು.

ಜೆಡಿಎಸ್ ಕಾನೂನು ಘಟ ಕದ ರಾಜ್ಯಾಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, ನ್ಯಾಯವಾದಿಗಳು ಪ್ರಬುದ್ಧ ಹಾಗೂ ಪ್ರಜ್ಞಾವಂತರಾಗಿದ್ದು, ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುತ್ತಾರೆ ಎಂಬ ನಂಬಿಕೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ವಕ್ತಾರ ಕೊಳೇನಹಳ್ಳಿ ಸತೀಶ್, ಎಚ್.ಎಸ್. ನಿಂಗರಾಜ್, ಕಾಕನೂರು ಮಂಜಣ್ಣ ಹಿರಿಯ ವಕೀಲ ಎಸ್. ದಿವಾಕರ್, ಎಚ್.ಎಸ್. ಯೋಗೇಶ್, ಎಚ್.ಪಿ. ವಿಶ್ವನಾಥ್, ರಾಜೇಶ್, ಹಿಮಾನಂದ್ ಇತರರಿದ್ದರು.

# ನಗರದಲ್ಲಿ ಇಂದು ಯಕ್ಷರಂಗದಿಂದ ಮತದಾನ ಜಾಗೃತಿ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆಯಾದ ಯಕ್ಷರಂಗ ಯಕ್ಷಗಾನ ಸಂಸ್ಥೆಯ ಆಶ್ರಯದಲ್ಲಿ ಇಂದು ಮಧ್ಯಾಹ್ನ 3 ಕ್ಕೆ ಕಲಾಕುಂಚ ಕಛೇರಿ ಸಭಾಂಗಣದಲ್ಲಿ ಮಹಿಳೆಯರು ಯಕ್ಷಗಾನ ವೇಷ, ಭೂಷಣದೊಂದಿಗೆ ಮತದಾನದ ಕುರಿತು ಜಾಗೃತಿ ಮೂಡಿಸಲು ಕಿರು ಯಕ್ಷ ಗಾನ ಪ್ರದರ್ಶನ ಮಾಡಲಿದ್ದಾರೆ ಎಂದು ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.

# ಮತದಿಂದ ರಾಷ್ಟ್ರದ ಭವಿಷ್ಯದ ಹಾದಿಯನ್ನು ರೂಪಿಸುವ ಶಕ್ತಿಯೇ ಚುನಾವಣೆ : ಉಪಕಾರ್ಯದರ್ಶಿ ಕೃಷ್ಣನಾಯ್ಕ



ದಾವಣಗೆರೆ, ಏ. 30 - ಮತ ಚಲಾಯಿಸುವ ಮೂಲಕ ರಾಷ್ಟ್ರದ ಭವಿಷ್ಯದ ಹಾದಿಯನ್ನು ರೂಪಿಸುವ ಶಕ್ತಿಯೇ ಮತದಾನವಾಗಿದ್ದು ಇದು ಪ್ರಜಾಪ್ರಭುತ್ವದ ನೀತಿಗೆ ಸಾಕ್ಷಿಯಾಗಿದೆ ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ ತಿಳಿಸಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ದಾವಣಗೆರೆ ಉತ್ತರ, ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ನಿಟ್ಟುವಳ್ಳಿಯಲ್ಲಿನ ಆರ್.ಎಂ. ಎಸ್.ಎ ಶಾಲೆಯಲ್ಲಿ ನಡೆದ ಸಂಗೀತ ಸುಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯುವಕರನ್ನು ಮತದಾರರಾಗಿ ನೋಂದಾಯಿಸಲು ಮತ್ತು ನಂತರ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು, ಪ್ರೇರೇಪಿಸಲು ಮತ್ತು ಉತ್ತೇಜಿಸಲು ಜಾಗೃತಿ ಮೂಲಕ ಪ್ರಯತ್ನಿಸಲಾಗುತ್ತಿದೆ. ಮತದಾನದ ದಿನ ನಾಗರಿಕರ ಕರ್ತವ್ಯವಾಗಿ ಮತದಾನದ ಮಹತ್ವವನ್ನು ಪ್ರತಿಬಿಂಬಿಸಲು ಮತ್ತು ಸಮಾಜದಲ್ಲಿ ಧನಾತ್ಮಕ ಬದಲಾವಣೆಯನ್ನು ತರುವ ಸಾಧನವಾಗಿ ನೋಡಲು ನಮಗೆ ಮತದಾನದ ಅವಕಾಶವನ್ನು ಒದಗಿಸುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರಿನ್ ಭಾನು ಎಸ್. ಬಳ್ಳಾರಿ ಕಾರ್ಯಕ್ರಮ ಉದ್ಘಾಟಿಸಿ, ಆಯಿಲ್ ಪೇಸ್ಟ್ ಡ್ರಾಯಿಂಗನ್ನು ಸ್ಪಂಜ್ ಕಲರ್‌ಪೌಡರ್‌ನಿಂದ ತಯಾರಿಸಿದ ಬೋರ್ಡ್‌ನಲ್ಲಿ ಮೇ 7 ರಂದು ಮತದಾನೋತ್ಸವ, ಮತದಾನ ಎಲ್ಲರ ಹಕ್ಕು ತಪ್ಪದೇ ಮತ ಚಲಾಯಿಸಿ ಎಂಬ ಪ್ರದರ್ಶನ ಇದರಲ್ಲಿ ಮೂಡಿಬಂದಿತು.

**ಶಾಲಾ ಗೋಡೆ, ಪಟಗಳಲ್ಲಿ ಮತದಾನ ಜಾಗೃತಿ ಮೂಡಿದ್ದು ಹೀಗೆ :** ಪ್ರಜಾಪ್ರಭುತ್ವವು ವಿದ್ಯಾವಂತರ ಮತದಿಂದ ಅಭಿವೃದ್ದಿ ಹೊಂದುತ್ತದೆ, ಉತ್ತಮ ನಾಳೆಗಾಗಿ ಮತ ಚಲಾಯಿಸಿ, ನಿಮ್ಮ ಮತ ನಿಮ್ಮ ಹಕ್ಕು, ಸಮಾನತೆ ನ್ಯಾಯ ಮತ್ತು ಪ್ರಗತಿಗಾಗಿ ಮತ ಚಲಾಯಿಸಿ, ಮತದಾನ ನಿಮ್ಮ ಹಕ್ಕು ಮತ್ತು ಕರ್ತವ್ಯ, ಯುವ ಮನಸುಗಳು ಶಕ್ತಿಯುತ ಮತಗಳು, ಚುನಾವಣೆ ನಿಮ್ಮ ದಿನ, ನಿಮ್ಮ ಧ್ವನಿ ಮತಗಟ್ಟೆಯಲ್ಲಿ ಪ್ರತಿಧ್ವನಿಸಲಿ, ಯುವ ಮತದಾರರೇ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ, ಮತದಾನ ಪ್ರಜಾಪ್ರಭುತ್ವದ ಹೃದಯ ಬಡಿತ, ಮತದಾನ ಒಂದು ಜವಾಬ್ದಾರಿ, ಅದನ್ನು ಗೌರವಿಸಿ, ಬದಲಾವಣೆಗೆ ಯುವ ಮತದಾರರು ಒಗ್ಗೂಡಲಿ, ನಿಮ್ಮ ಮತವು ನಮ್ಮ ನಾಯಕನನ್ನು ರೂಪಿಸಲಿ.

ಕಾರ್ಯಕ್ರಮದಲ್ಲಿ ಬಿ.ಇ.ಒ. ಶ್ರೀಮತಿ ಪುಷ್ಪಲತಾ , ಜಿಲ್ಲಾ ಪಂಚಾಯತ್ ಉಪನಿರ್ದೇಶಕರಾದ ಶಾರದಾ ದೊಡ್ಡಗೌಡ್ರು, ದಕ್ಷಿಣ ಕ್ಷೇತ್ರ ಸಂಪನ್ಮೂಲ ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಬಿ.ಐ.ಆರ್. ಟಿ ಶಿಕ್ಷಕರು ಹಾಗೂ ಸಿಬ್ಬಂದಿಗಳು ಇನ್ನಿತರರು ಭಾಗವಹಿಸಿದ್ದರು.

# ಸೋಲಿನ ಭಯದಿಂದ ಸಚಿವರಿಂದ ವೈಯಕ್ತಿಕ ಆರೋಪ : ಜಾಧವ್

ದಾವಣಗೆರೆ, ಏ.30- ಜಿಲ್ಲಾ ಉಸ್ತುವಾರಿ ಸಚಿವರು ಸೋಲಿನ ಭಯದಿಂದ, ಹತಾಶರಾಗಿ ಸಂಸದರ ಬಗ್ಗೆ ವೈಯಕ್ತಿಕವಾಗಿ ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಹೇಳಿದರು. ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದರ ಬಗ್ಗೆ ಸಚಿವರ ಆರೋಪಗಳು ಹಾಗೂ ಏಕವಚನ ಬಳಕೆ, ವೈಯಕ್ತಿಕ ನಿಂದನೆಗಳು ಅವರ ವ್ಯಕ್ತಿತ್ವಕ್ಕೆ ತಕ್ಕುದಲ್ಲ ಎಂದರು.

ವೃತ್ತಿಯನ್ನು ರಾಜಕೀಯಕ್ಕೆ ಎಳೆದು ತರುವ ಸಚಿವರು, ಗುಟ್ಕಾ ಮಾರಾಟ ಮಾಡುವ ಸಂಸದರು ಜನರ ಆರೋಗ್ಯ ಹಾಳು ಮಾಡುತ್ತಾರೆ ಎನ್ನುತ್ತಾರೆ. ಹಾಗಾದರೆ ಕಲ್ಲೇಶ್ವರ ರೈಸ್ ಮಿಲ್‌ನಲ್ಲಿ ಫೈರ್ ಬ್ರಾಂಡ್ ಹೆಸರಿನಲ್ಲಿ ತಾವೇನು ಮಾಡುತ್ತೀರಿ ಎಂದು ಜನರಿಗೆ ತಿಳಿಸಬೇಕು ಎಂದು ಆಗ್ರಹಿಸಿದರು. ಸಂಸದರ ಅಭಿವೃದ್ಧಿ ಶೂನ್ಯ ಎಂದು ಹೇಳುವ ಸಚಿವರು, ತಮ್ಮ ಹಾಗೂ ತಮ್ಮ ತಂದೆಯ ಅವಧಿಯಲ್ಲಿ ಏನು ಅಭಿವೃದ್ಧಿ ಮಾಡಿದ್ದೀರಿ, ದಾವಣಗೆರೆಗೆ ಎಷ್ಟು ಅನುದಾನ ತಂದಿದ್ದೀರಿ ಎಂಬ ಪಟ್ಟಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರುಗಳಾದ ಕೋಳೇನಹಳ್ಳಿ ಬಿ.ಎಂ. ಸತೀಶ್, ನಿಂಗರಾಜ್ ಗೌಳಿ, ಸುರೇಶ್ ರಾವ್ ಸಿಂಧೆ, ಶಂಕರಗೌಡ ಬಿರಾದಾರ್, ಜಯಪ್ರಕಾಶ್ ಕೊಂಡಜ್ಜಿ ಇದ್ದರು.

# ನಗರದಲ್ಲಿ ಇಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಇಂದು ವಿವಿಧ ಕಡೆಗಳಲ್ಲಿ ಸಭೆ ಮತ್ತು ರೋಡ್ ಷೋ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಬೆಳಿಗ್ಗೆ 11.30 ಗಂಟೆಗೆ ನಿಜಲಿಂಗಪ್ಪ ಬಡಾವಣೆಯ ಛಲವಾದಿ ಸಮಾಜ ಬಾಂಧವರ ಸಭೆ ಹಾಗೂ 12.30ಕ್ಕೆ ವಕೀಲರ ಸಭೆಯಲ್ಲಿ ಪಾಲ್ಗೊಳ್ಳುವರು. ನಂತರ ಬಸವಾಪಟ್ಟಣ, ಸಾಗರಪೇಟೆ, ಚಿರಡೋಣಿ, ಕಂಸಾಗರ, ಕಣಿವೆ ಬಿಳಚಿ, ತ್ಯಾವಣಿಗಿ, ಕಂದಗಲ್ಲು, ಮಳಲಕೆರೆ, ಅತ್ತಿಗೆರೆ, ರಾಮಗೊಂಡನಹಳ್ಳಿ, ಕುರ್ಕಿ, ತೋಳಹುಣಸೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ರೋಡ್ ಷೋ ನಡೆಸುವರು.

# ದಲಿತ ಸಂಘಟನೆಗಳ ಒಕ್ಕೂಟದಿಂದ ಕಾಂಗ್ರೆಸ್‌ಗೆ ಬೆಂಬಲ

ದಾವಣಗೆರೆ, ಏ.30- ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟ ನಿರ್ಧರಿಸಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಶಿವಮೊಗ್ಗ, ಕಳೆದ ಹತ್ತು ವರ್ಷಗಳಿಂದ ದೇಶ ಅಧೋಗತಿಯತ್ತ ಸಾಗುತ್ತಿದೆ. ಕೋಮು ರಾಜಕೀಯ ವಿಜೃಂಭಿಸುತ್ತಿದೆ. ಹಸಿವು, ಅಸ್ಪೃಶ್ಯತೆ ಹೆಚ್ಚಾಗಿದೆ. ಜಾತ್ಯತೀತತೆ, ಪ್ರಗತಿಪರತೆ ಅಪಹಾಸ್ಯಕ್ಕೆ ಒಳಗಾಗಿದೆ ಎಂದರು. ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳು ಬಡವರಿಗೆ ಅನುಕೂಲವಾಗಿವೆ. ಸಂವಿಧಾನ ಉಳಿದರೆ ದೇಶ ಉಳಿಯಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ 28 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಲು ನಿರ್ಧರಿಸಲಾಗಿದ್ದು, ಜಿಲ್ಲೆಯಲ್ಲೂ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸುವಂತೆ ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ಎಸ್.ಎಸ್. ರಾಜ್ಯ ಸಂಚಾಲಕ ಗೋವಿಂದರಾಜು, ಭೀಮ್ ಆರ್ಮಿ ರಾಜ್ಯಾಧ್ಯಕ್ಷ ಡಿ.ಎಸ್. ರಾಜಗೋಪಾಲ್, ದಲಿತ ಸಂಘರ್ಷ ಸೇನೆ ರಾಜ್ಯಾಧ್ಯಕ್ಷ ಎ. ಗೋಪಾಲ, ವಿಜಯಮ್ಮ, ಕುಂದುವಾಡ ಮಂಜುನಾಥ್, ಚಿತ್ರಲಿಂಗಪ್ಪ, ಪ್ರದೀಪ್, ಮಂಜುನಾಥ್, ಮಹಾಂತೇಶ್, ಶಿವಶಂಕರ್ ಇತರರಿದ್ದರು.



# ಮಾಯಕೊಂಡದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ

ದಾವಣಗೆರೆ, ಏ. 27 - ಸಂಸದ ಡಾ.ಜಿ.ಎಂ. ಸಿದ್ದೇಶ್ವರ್ ಅವರ ನೇತೃತ್ವದಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ರಂಗಪ್ಪ, ಜಯಪ್ಪ, ಹನುಮಂತಪ್ಪ, ರೇವಣಸಿದ್ದಪ್ಪ, ಹರೀಶ್, ನಾಗರಾಜು, ರಾಮಪ್ಪ, ಅಶೋಕ, ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್, ಬಿಜೆಪಿಯ ಮುಖಂಡರಾದ ಬಿ.ಟಿ. ಸಿದ್ದಪ್ಪ, ಜಿ.ಎಸ್. ಶ್ಯಾಮ, ಎಂಎಲ್ಸಿ ನವೀನ್ ಕುಮಾರ್, ಆಲೂರು ನಿಂಗರಾಜ್, ಅಜಯ್, ಮೂಗಪ್ಪ, ಕರಿಬಸಪ್ಪ ಇದ್ದರು.

# ನಗರದಲ್ಲಿಂದು ಛಲವಾದಿ ಸಮಾಜದ ಸಭೆ

ದಾವಣಗೆರೆ, ಏ.30- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸುವ ಸಲುವಾಗಿ, ಮೇ 1ರಂದು ಬೆಳಗ್ಗೆ 11 ಗಂಟೆಗೆ ನಗರದಲ್ಲಿ ಛಲವಾದಿ ಸಮಾಜದ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಛಲವಾದಿ ಮಹಾಸಭಾ ಅಧ್ಯಕ್ಷ ಎನ್. ರುದ್ರಮುನಿ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ನಿಜಲಿಂಗಪ್ಪ ಬಡಾವಣೆಯ ಛಲವಾದಿ ಸಮುದಾಯ ಭವನದಲ್ಲಿ ನಡೆಯುವ ಸಭೆಯಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹಾದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮುಖಂಡ ಎಚ್.ಕೆ. ಬಸವರಾಜ್ ಮಾತನಾಡಿ, ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 60 ಸಾವಿರ ಮತದಾರರಿದ್ದು, ಶೇ.90ಕ್ಕೂ ಹೆಚ್ಚು ಮತದಾರರು ಕಾಂಗ್ರೆಸ್‌ಗೆ ಮತ ನೀಡುವ ಸಂಕಲ್ಪ ಮಾಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ಎಸ್. ಶೇಖರಪ್ಪ, ಟಿ.ಎಸ್. ರಾಮಯ್ಯ, ಡಾ.ಜಗನ್ನಾಥ್, ಎಚ್.ಚಂದ್ರಪ್ಪ, ಎಚ್.ನವೀನ್‌ಕುಮಾರ್, ಸಾರಥಿ ಬಸವರಾಜು, ಕೆ.ಗಿರೀಶ್, ಎ.ಡಿ. ಕೊಟ್ರಬಸಪ್ಪ, ರಾಘವೇಂದ್ರ ಕೊಂಡಜ್ಜಿ ಇದ್ದರು.

# ನಗರದಲ್ಲಿ ಇಂದು ಸಿಪಿಐ- ಎಐಟಿಯುಸಿ ನೇತೃತ್ವದಲ್ಲಿ ವಿಶ್ವ ಕಾರ್ಮಿಕ ದಿನಾಚರಣೆ

ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಎಐಟಿಯುಸಿ ದಾವಣಗೆರೆ ಜಿಲ್ಲಾ ಮಂಡಳಿಗಳ ನೇತೃತ್ವದಲ್ಲಿ ಇಂದು ವಿಶ್ವ ಕಾರ್ಮಿಕ ದಿನಾಚರಣೆ ಆಚರಿಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ಪಿ. ಬಸವನಗೌಡ ರಸ್ತೆ (ನಿಟುವಳ್ಳಿ ರಸ್ತೆಯ) ಎಸ್‌ಎಸ್‌ಪಿ. ಕಾಂಪ್ಲೆಕ್ಸ್ ಬಳಿಯಿಂದ ಕಾರ್ಮಿಕರ ಬೃಹತ್ ಮೆರವಣಿಗೆ ಆರಂಭಗೊಂಡು ನಗರದಲ್ಲಿ ಸಂಚರಿಸಿ ನಂತರ ಜಯದೇವ ಸರ್ಕಲ್ ಹತ್ತಿರದ ನಾಟ್ಯಾಚಾರ್ಯ ಕುಲಕರ್ಣಿ ರಸ್ತೆಯಲ್ಲಿ ಬಹಿರಂಗ ಸಭೆ ನಡೆಸಲಾಗುವುದು.

ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಬಿ. ಅಮ್ಜದ್‌ರವರು ಬಹಿರಂಗ ಸಭೆ ಉದ್ಘಾಟನೆ ನೆರವೇರಿಸಿ ಮಾತನಾಡುವರು. ಸಿಪಿಐ ಹಿರಿಯ ಮುಖಂಡ ಆನಂದರಾಜ್ ಅಧ್ಯಕ್ಷತೆ ವಹಿಸುವರು.

ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಉಮೇಶ್, ಟಿ.ಎಸ್. ನಾಗರಾಜ್, ಎಂ.ಬಿ. ಶಾರದಮ್ಮ, ರುದ್ರಮ್ಮ ಬೆಳಲಗೆರೆ, ಜಯಪ್ಪ, ವಿ. ಲಕ್ಷ್ಮಣ, ಟಿ.ಹೆಚ್. ನಾಗರಾಜ್, ಮಹಮದ್ ಭಾಷಾ, ಮಹಮ್ಮದ್ ರಫೀಕ್, ಆವರಗೆರೆ ವಾಸು, ಐರಣಿ ಚಂದ್ರು ಇತರರು ವೇದಿಕೆಯಲ್ಲಿರುವರು.

# ನಗರರದಲ್ಲಿ ಇಂದು ಜಿಲ್ಲಾ ಪಂಚಮಸಾಲಿ ಸಮಾಜದ ಸಭೆ

ದಾವಣಗೆರೆ, ಏ.30- ನಾಳೆ ದಿನಾಂಕ 1ರ ಬುಧವಾರ ನಗರದ ಬಂಟರ ಭವನದಲ್ಲಿ ಜಿಲ್ಲಾ ಪಂಚಮಸಾಲಿ ಸಮಾಜದ ಸಭೆ ಕರೆಯಲಾಗಿದೆ ಎಂದು ಮಾಜಿ ಶಾಸಕ, ಸಮಾಜದ ಮುಖಂಡ ಎಚ್.ಎಸ್. ಶಿವಶಂಕರ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 12 ಗಂಟೆಗೆ ನಡೆಯುವ ಈ ಸಭೆಯನ್ನು ಪಂಚಮಸಾಲಿ ಸಮಾಜ ಬಾಂಧವರಲ್ಲಿ ಉಂಟಾಗಿರುವ ಗೊಂದಲ ನಿವಾರಣೆಗಾಗಿ ಆಯೋಜಿಸಲಾಗಿದೆ ಎಂದರು.

ಸಮಾಜದ ಕೆಲ ಸ್ವಾಮೀಜಿಗಳ ಹೇಳಿಕೆಯಿಂದ ಸಮುದಾಯದವರು ದಿಕ್ಕು ತಪ್ಪಬಾರದು ಎಂಬುದನ್ನು ತಿಳಿ ಹೇಳಲು ಮತ್ತು ಸಮಾಜ ಬಾಂಧವರಲ್ಲಿ ಮೂಡಿರುವ ಗೊಂದಲ ಸರಿ ಪಡಿಸಲು ಸಮಾಜದ ಯುವ ಘಟಕದ ರಾಜ್ಯಾಧ್ಯಕ್ಷ ಬಿ.ಜಿ. ಅಜಯ್‌ಕುಮಾರ್ ಅಧ್ಯಕ್ಷತೆಯಲ್ಲಿ ಕರೆದಿರುವ ಸಭೆಯನ್ನು ಮಾಜಿ ಕೇಂದ್ರ ಸಚಿವ ಬಸವರಾಜ್ ಪಾಟೀಲ್ ಯತ್ನಾಳ್ ಉದ್ಘಾಟಿಸಲಿದ್ದಾರೆ.

ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಹೋರಾಟದ ಮುಂದಾಳತ್ವ ವಹಿಸಿದ್ದ ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಎಂದೂ ರಾಜಕೀಯ ರಾಯಭಾರಿಯಂತೆ ವರ್ತಿಸಿಲ್ಲ. ಅವರಿಗೆ ಮಂತ್ರಿ ಸ್ಥಾನ ಕೊಡಬೇಕು. ಇವರಿಗೆ ಬೋರ್ಡ್ ಅಧ್ಯಕ್ಷ ಸ್ಥಾನ ನೀಡಬೇಕೆಂದು ಎಂದೂ ಕೇಳಿಲ್ಲ. ಆದರೆ, ಸಮಾಜದ ಕೆಲ ಮಠಾಧೀಶರು ಲೋಕಸಭೆ ಸೀಟು ಹಂಚಿಕೆಯಲ್ಲಿ ಪಂಚಮಸಾಲಿ ಸಮಾಜಕ್ಕೆ ಅನ್ಯಾಯವಾಗಿದ್ದು, ಸಮುದಾಯದ ಜನರು ಬಿಜೆಪಿ ವಿರುದ್ಧ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿಕೆ ನೀಡಿರುವುದರಿಂದ ಗೊಂದಲ ನಿರ್ಮಾಣವಾಗಿದೆ ಎಂದು ಶ್ರೀ ವಚನಾನಂದ ಸ್ವಾಮೀಜಿ ಹೆಸರು ಹೇಳದೆಯೇ ಶಿವಶಂಕರ್ ಅಸಮಾದಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಬಿ.ಜಿ. ಅಜಯಕುಮಾರ್, ಚಿದಾನಂದಪ್ಪ. ಮೋತಿ ಶಂಕರಪ್ಪ, ಕುಣೆಬೆಳಕೆರೆ ಈಶ್ವರಪ್ಪ, ಎಸ್. ಓಂಕಾರಪ್ಪ, ಎ.ಪಿ. ಗಣೇಶ್, ರುದ್ರೇಶ್, ಪೈಲ್ವಾನ್ ಮಂಜುನಾಥ್, ಡಿ.ಜಿ. ನಂಜಪ್ಪ, ಸಿದ್ದನಗೌಡ್ರು, ಅಡಿಕೆ ಪ್ರೇಮಕುಮಾರ್ ಇದ್ದರು.

# ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಪ್ರಾರ್ಥಿಸಿ ದೀಡು ನಮಸ್ಕಾರ



ದಾವಣಗೆರೆ, ಏ. 30 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಪ್ರಾರ್ಥಿಸಿ, ಕಾಂಗ್ರೆಸ್ ಮುಖಂಡ ವೀರಭದ್ರಸ್ವಾಮಿ ಮಟ್ಟಿಕಲ್ ಅವರು ಇಂದು ದೀಡು ನಮಸ್ಕಾರ ಸೇವೆ ಸಲ್ಲಿಸಿದರು.

ಬೆಳಿಗ್ಗೆ ಹಳೇಪೇಟೆಯ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಿಂದ ಹೊರಟು ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಗುಗ್ಗಳದೊಂದಿಗೆ ಉರುಳು ಸೇವೆಯನ್ನು ವೀರಭದ್ರಸ್ವಾಮಿ ನೆರವೇರಿಸಿದರು. ಬಳಿಕ ಬಾಯಿಗೆ ಶಸ್ತ್ರ, ನಾಲಿಗೆಗೆ ಶಿವದಾರ ಧರಿಸಿದರು. ಬಳಿಕ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ವೀರಭದ್ರಸ್ವಾಮಿ ಮಟ್ಟಿಕಲ್ ಅವರು ಮಾತನಾಡಿ, ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್. ಎಸ್. ಮಲ್ಲಿಕಾರ್ಜುನ್ ಅವರು ಅಭಿವೃದ್ಧಿಯ ಪರ್ವವನ್ನೇ ಹರಿಸಿದ್ದಾರೆ. ಮತ್ತಷ್ಟು ಅಭಿವೃದ್ಧಿಗೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಪ್ರಾರ್ಥಿಸಿ ಈ ಸೇವೆ ನೆರವೇರಿಸಿದ್ದೇನೆ. ಅವರ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಶಶಿ ಶೇಖರ್, ಅಣಜಿ ಬಸವರಾಜ್ ಮತ್ತಿತರರು ಹಾಜರಿದ್ದರು.

# ಮೆಟಾ ಸರ್ಕಾರಿ ಇಲಾಖೆಗಿಂತ ಕಳಪೆ : ಹೈಕೋರ್ಟ್ ತರಾಟೆ

ನವದೆಹಲಿ, ಏ. 30 – ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಇನ್‌ಸ್ಟಾಗ್ರಾಂಗಳ ಮಾತೃಸಂಸ್ಥೆಯಾದ ಮೆಟಾ, ಸರ್ಕಾರಿ ಇಲಾಖೆಗಿಂತಲೂ ಕಳಪೆಯಾಗಿ ಕೆಲಸ ಮಾಡುತ್ತಿದೆ ಎಂದು ದೆಹಲಿ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.ಟಿವಿ ಟುಡೇ ನೆಟ್‌ವರ್ಕ್‌ನ ಇನ್‌ಸ್ಟಾಗ್ರಾಂ ಪುಟವೊಂದನ್ನು ತಡೆದಿರುವುದಕ್ಕೆ ಸಂಬಂಧಿಸಿದಂತೆ ಮೆಟಾ ಸೂಕ್ತ ಉತ್ತರ ನೀಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ. ಈ ವಿಷಯದ ಬಗ್ಗೆ ವಿಚಾರಣೆ ನಡೆಸುತ್ತಿರುವ ದೆಹಲಿ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ಮನ್‌ಮೀತ್ ಅರೋರಾ ಅವರನ್ನು ಒಳಗೊಂಡ ಪೀಠ, ನಿಮ್ಮ ವ್ಯವಸ್ಥೆ ಕೆಲಸ ಮಾಡುತ್ತಿಲ್ಲ. ಅದು ಕೆಲಸ ಮಾಡಬೇಕು. ನಿಮ್ಮ ಕಾರ್ಯನಿರ್ವಹಣೆಯನ್ನು ಮೊದಲು ಸರಿಪಡಿಸಿಕೊಳ್ಳಿ. ಇಲ್ಲದೇ ಹೋದರೆ ನ್ಯಾಯಾಲಯ ಕ್ರಮ ತೆಗೆದುಕೊಳ್ಳುವ ಆದೇಶವೊಂದನ್ನು ಹೊರಡಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

# ಜೆಡಿಎಸ್ ಸಂಸದನ ಬಂಧನಕ್ಕೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಆಗ್ರಹ

ದಾವಣಗೆರೆ, ಏ. 30 - ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಕೂಡಲೇ ಬಂಧಿಸುವಂತೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಒತ್ತಾಯಿಸಿದೆ.

ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ ವ್ಯಕ್ತಿಯನ್ನು ಪ್ರಧಾನಿ ಮೋದಿ ರಕ್ಷಿಸುತ್ತಿದ್ದಾರೆ ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಮಂಗಳಮ್ಮ, ಮಂಜಮ್ಮ ದೂರಿದ್ದಾರೆ.

# ಲೋಕ ಚುನಾವಣೆ : ಅಲೆಮಾರಿ ಬುಡಕಟ್ಟು ಮಹಾಸಭಾದಿಂದ ಕಾಂಗ್ರೆಸ್‌ಗೆ ಬೆಂಬಲ

ದಾವಣಗೆರೆ, ಏ.30- ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವುದಾಗಿ ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾದ ಜಿಲ್ಲಾ ಘಟಕ ತಿಳಿಸಿದೆ. ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತ, ತಳ ಸಮುದಾಯದ ಶ್ರೇಯೋಭಿವೃದ್ಧಿಗೆ ಜನಪರ ಕಾರ್ಯಕ್ರಮ ಗಳನ್ನು ಜಾರಿಗೆ ತರುವುದಾಗಿ ಪ್ರಣಾಳಿಕೆಯಲ್ಲಿ ಹೇಳಿರುವುದು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲೆಮಾರಿ ನಿಗಮ ಸ್ಥಾಪಿಸಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿರುವು ದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ತಿಪ್ಪೇಶಪ್ಪ ಹೇಳಿದರು. ಗೌರವಾಧ್ಯಕ್ಷ ಡಿ.ತಿಪ್ಪಣ್ಣ, ಡಾ.ಎಸ್.ವಿ. ಮಂಜಪ್ಪ, ಡಿ.ಕುಮಾರ್, ಹರೀಶ್, ಚಿತ್ರಲಿಂಗಪ್ಪ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಹರಿಹರದಲ್ಲಿ ಇಂದು ಪ್ರೊ.ಬಿ. ಕೃಷ್ಣಪ್ಪ ಸಂಸ್ಮರಣೆ, ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನ

ದಾವಣಗೆರೆ, ಏ.30- ಹರಿಹರ ಹೊರವಲಯದ ಪ್ರೊ. ಬಿ. ಕೃಷ್ಣಪ್ಪ ಸಾಂಸ್ಕೃತಿಕ ಭವನ ಮೈತ್ರಿ ವನದಲ್ಲಿ ನಾಳೆ ದಿನಾಂಕ 1ರ ಬುಧವಾರ ಬೆಳಗ್ಗೆ 11 ಗಂಟೆಗೆ ಪ್ರೊ. ಬಿ. ಕೃಷ್ಣಪ್ಪ ಅವರ ಸಂಸ್ಮರಣೆ, ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನ ಹಾಗೂ ವಿಶ್ವ ಕಾರ್ಮಿಕ ದಿನಾಚರಣೆ ಏರ್ಪಡಿಸಲಾಗಿದೆ ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ ಮಾಹಿತಿ ನೀಡಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್, ಮಾನವ ಬಂಧುತ್ವ ವೇದಿಕೆ, ಸಿವಿಜಿ ಬಾಣಗೆರೆ, ಏಕಾಂತಗಿರಿ ಟ್ರಸ್ಟ್ ಹಾಗೂ ದಲಿತ ಸಂಘರ್ಷ ಸಮಿತಿ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮವನ್ನು ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸಲಿದ್ದಾರೆ ಎಂದರು.

ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್‌ನ ಇಂದಿರಾ ಕೃಷ್ಣಪ್ಪ ಅಧ್ಯಕ್ಷತೆ ವಹಿಸುವರು. ಮೇವಗಲ್ ಸೋಮಶೇಖರ್ ಅವರ 'ದಾಂಡಿ ಯಾತ್ರೆ' ಕೃತಿಯನ್ನು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ, ಇಂದಿರಾ ಕೃಷ್ಣಪ್ಪ ಅವರ 'ಮಹಿಳಾ ಚಳವಳಿಯ ಜನನಿ ಸಾವಿತ್ರಿಬಾ ಫುಲೆ' ಪುಸ್ತಕವನ್ನು ಹಿಮೊಫಿಲಿಯಾ ಸೊಸೈಟಿಯ ಡಾ. ಸುರೇಶ್ ಹನಗವಾಡಿ, 'ಜನಪರ ಚರಿತ್ರೆಯ ಮರುನೋಟ', 'ಫುಲೆ ದಂಪತಿಗಳ ಚಿಂತನಧಾರೆ' ಮತ್ತು 'ಈಶಾವ್ಯಾಸಂ' ಕೃತಿಗಳನ್ನು ನಿವೃತ್ತ ಪ್ರಾಧ್ಯಾಪಕ ಸಿ.ವಿ. ಪಾಟೀಲ್ ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದರು.

ಕೃತಿ ಕುರಿತು ಜಾನಪದ ತಜ್ಞ ಡಾ.ಮೀರಾಸಾಬಿಹಳ್ಳಿ ಶಿವಣ್ಣ, ನಿವೃತ್ತ ಪ್ರಾಧ್ಯಾಪಕ ಡಾ. ಸಣ್ಣರಾಮ, ಸಾಹಿತಿ ಡಾ.ಶಿವಲಿಂಗಪ್ಪ ಮೀರಾಸಾಬಿಹಳ್ಳಿ ಮಾತನಾಡುವರು. ಪ್ರೊ.ಬಿ. ಕೃಷ್ಣಪ್ಪ ಮತ್ತು ಕರ್ನಾಟಕ ದಲಿತ ಚಳವಳಿ ಕನ್ನಡ ಸಾಹಿತ್ಯ ಮತ್ತು ಪರಿಣಾಮಗಳು ಮಹಾ ಪ್ರಬಂಧದ ಕುರಿತು ಪ್ರಾಧ್ಯಾಪಕ ಡಾ.ಕೆರೆಯಾಗಳಹಳ್ಳಿ ತಿಪ್ಪೇಸ್ವಾಮಿ ಮಾಹಿತಿ ನೀಡುವರು. ಕೃತಿಕಾರರಿಗೆ ಮತ್ತು ಉಪನ್ಯಾಸಕರಿಗೆ ರುದ್ರಪ್ಪ ಹನಗವಾಡಿ ಸನ್ಮಾನಿಸುವರು. ದಲಿತ ಮುಖಂಡ ಮಾವಳ್ಳಿ ಶಂಕರ್, ಚಿತ್ರ ಕಲಾವಿದ ಸಿ.ಚಂದ್ರಶೇಖರ್ ಉಪಸ್ಥಿತರಿರುವರು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಳಗದ ಶಿವಕುಮಾರ್ ಮಾಡಾಳ್, ಸತೀಶ್ ಅರವಿಂದ್ ಇದ್ದರು.

## ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**ಅಸಲು ದಾವಾ ನಂ. 286/2023**

ವಾದಿ : ಶ್ರೀಮತಿ ಚನ್ನಮ್ಮ @ ಕೊಟ್ಟೂರುಮಠ ಉಮಾ - ವಿರುದ್ಧ-

ಪ್ರತಿವಾದಿಗಳು : ಶ್ರೀಮತಿ ಜಗನ್ಮಾತೆ ಮತ್ತು ಇತರರು

ಪ್ರತಿವಾದಿ : 3) ಶ್ರೀ ಸಿದ್ದೇಶ್ ಬಿನ್ ಗುರುಸಂಗನಬಸವಯ್ಯ, ವಾಸ : ಅಂಜನಾದ್ರಿ ನಿಲಯ, ಡೋರ್ ನಂ. 649/5, 2ನೇ ಮೇನ್. 2ನೇ ಕ್ರಾಸ್, 1ನೇ ಮಹಡಿ, ಉತ್ತಮ್ ಬಡಾವಣೆ, ಆವರಗೆರೆ, ದಾವಣಗೆರೆ ತಾಲ್ಲೂಕು.

**ಸಿಪಿಸಿ ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ವಾದಿಯು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಪರಿಹಾರ ಕೋರಿ ಸದರಿ ದಾವೆಯನ್ನು ಸಲ್ಲಿಸಿದ್ದು, ಪ್ರತಿವಾದಿ ನಂ. 3 ರವರಿಗೆ ನ್ಯಾಯಾಲಯದಿಂದ ಹೊರಡಿಸಲಾಗಿರುವ ಸಮನ್ಸ್ / ನೋಟಿಸ್ ಹಾಗೂ ಅಂಚೆ ನೋಟಿಸ್ ಇತ್ಯಾದಿಗಳನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೇ ಹಿಂದಿರುಗಿಸಿರುವ ಪ್ರಯುಕ್ತ ತಮಗೆ ಸಾರ್ವಜನಿಕ ನೋಟಿಸನ್ನು ಈ ಮೂಲಕ ಹೊರಡಿಸುತ್ತಿದ್ದು, ದಿನಾಂಕ : 26.06.2024 ರಂದು ಬೆಳಿಗ್ಗೆ 11.00 ಗಂಟೆಯ ಸಮಯದಂದು ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸ ತಕ್ಕದ್ದು. ನಿರ್ಲಕ್ಷಿಸಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ : 25.04.2024 ರಂದು ಹೊರಡಿಸಲ್ಪಟ್ಟಿದೆ.

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ವಾದಿ ಪರ ವಕೀಲರು**
**ಸಹಿ/- (ಎಂ.ಎಸ್. ರಾಜಕುಮಾರ್)**
**ಸ್ಥಳ : ದಾವಣಗೆರೆ. ದಿನಾಂಕ : 22.4.2024**


## ಸನ್‌ಶೈನ್ ಪುರಂತರ ಹಾಸ್ಪಿಟಲ್

SUNSHINE PURANTAR HOSPITAL
Care with Human Touch

3rd Main, MCC 'A' Block, Davangere - 577 002.

**REQUIREMENT**

| POST | QUALIFICATION | EXPERIENCE | SALARY |
|---|---|---|---|
| WARD NURSING | GNM / BSC | 3 YEARS | 12000-14000 |
| | GNM / BSC | 5 YEARS | 15000-18000 |
| | ANM | 3 YEARS | 9000-10000 |
| OT NURSING | DOT & AT | 3 YEARS | 15000-18000 |
| | | 5 YEARS | 20000-25000 |
| MANAGER | ANY DEGREE | 3 YEARS | 15000 |
| | | 5 YEARS | 21000 |
| AAYA / HOUSEKEEPING | - | - | 8000-10000 |

Salary Based on Eligibility & Experience
Apply with : Biodata, Recent Colour Photo,
Address Proof, Degree Certificate. ಉಚಿತ ವಸತಿ ಸೌಲಭ್ಯವಿರುತ್ತದೆ.

**SUNSHINE PURANTARA HOSPITAL**

CONTACT : 98442 12123, 88846 34545

## ಮಹಿಳೆಯರನ್ನು ದುಷ್ಕರ್ಮಿಗಳ ಎದುರು ನಿಲ್ಲಿಸಿದ್ದ ಪೊಲೀಸರು

ನವದೆಹಲಿ, ಏ. 30 – ಮಣಿಪುರದಲ್ಲಿ ವಿವಸ್ತ್ರಗೊಳಿಸಲಾದ ಇಬ್ಬರು ಮಹಿಳೆಯರನ್ನು, ಪೊಲೀಸರೇ ತಮ್ಮ ವಾಹನದಲ್ಲಿ ದುಷ್ಕೃತ್ಯ ಎಸಗಿದವರ ಎದುರು ನಿಲ್ಲಿಸಿದ್ದರು ಎಂದು ಸಿ.ಬಿ.ಐ. ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕಂಗ್ಪೊಕ್ಪಿ ಜಿಲ್ಲೆಯ ಹಳ್ಳಿಯೊಂದರ ಮೇಲೆ ಸಾವಿರಕ್ಕೂ ಹೆಚ್ಚು ಮೀಟಿ ಗಲಭೆಕೋರರು ದಾಳಿ ನಡೆಸಿದ್ದರು. ಆಗ ಇಬ್ಬರು ಮಹಿಳೆಯರು ರಕ್ಷಣೆ ಕೋರಿ ಪೊಲೀಸರ ಬಳಿ ಬಂದಿದ್ದರು. ಈ ಮಹಿಳೆಯರು ಪೊಲೀಸ್ ವಾಹನವನ್ನೇರಿದ್ದರು. ಆದರೆ, ಮಹಿಳೆಯರನ್ನು ಗಲಭೆಕೋರರ ಎದುರು ನಿಲ್ಲಿಸಿ ಪೊಲೀಸರು ಪರಾರಿಯಾಗಿದ್ದರು ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಕಳೆದ ವರ್ಷ ಜುಲೈ ತಿಂಗಳಲ್ಲಿ ಮಹಿಳೆಯರ ವಿವಸ್ತ್ರಗೊಳಿಸಿದ ದೃಶ್ಯ ವೈರಲ್ ಆಗಿತ್ತು. ಬೆತ್ತಲೆ ಹಲ್ಲೆಗೆ ಗುರಿಯಾದ ಮಹಿಳೆಯರಲ್ಲಿ ಒಬ್ಬರು, ಕಾರ್ಗಿಲ್ ವೀರಯೋಧನ ಪತ್ನಿ.

## ನಿಟುವಳ್ಳಿಯಲ್ಲಿ ಇಂದು ಕರಿಯಾಂಬಿಕಾ ದೇವಿ ದೊಡ್ಡಜಾತ್ರೆ



ದಾವಣಗೆರೆ - ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನಿಂದ ನಡೆಯುತ್ತಿರುವ ಶ್ರೀ ಕರಿಯಾಂಬಿಕಾ ದೇವಿಯ ಜಾತ್ರಾ ಮಹೋತ್ಸವದಲ್ಲಿ ಇಂದು ಶ್ರೀ ಅಮ್ಮನವರ ದೊಡ್ಡಜಾತ್ರೆ ಜರುಗಲಿದೆ. ನಾಳೆ ದಿನಾಂಕ 2 ರಂದು ಮಧ್ಯಾಹ್ನ 3ಕ್ಕೆ ಹುಲ್ಲುಮನೆ ಭೀಮಪ್ಪನವರ ಜಮೀನಿನಲ್ಲಿ ಭಾರೀ ಬಹಿರಂಗ ಬಯಲು ಜಂಗೀ ಕುಸ್ತಿಗಳ ಉದ್ಘಾಟನೆ ನಡೆಯಲಿದೆ. ಅಂದು ಸಂಜೆ 6.30ಕ್ಕೆ ಕಲಾ ತಂಡದವರಿಂದ ನಿಟುವಳ್ಳಿಯ ಶ್ರೀ ಆಂಜನೇಯ ರಂಗ ಮಂದಿರದಲ್ಲಿ ನಾಟಕ ಪ್ರದರ್ಶನ ನಡೆಯಲಿದ್ದು, ಸಂಜೆ 7.30ಕ್ಕೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಪ್ರವೀಣ್ ಹುಲ್ಲುಮನಿ (9986212971) ಅವರನ್ನು ಸಂಪರ್ಕಿಸಬಹುದು.

# ಮತ ಎಣಿಕೆ ಕೇಂದ್ರದ ಸಿದ್ಧತೆಯ ಪರಿಶೀಲನೆ



ದಾವಣಗೆರೆ, ಏ.30- ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಬರುವ ಮೇ 7 ರಂದು ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 4 ರಂದು ಬೆಳಗ್ಗೆ 8 ಗಂಟೆಯಿಂದ ತೋಳಹುಣಸೆಯಲ್ಲಿನ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿಯಲ್ಲಿ ನಡೆಯಲಿದ್ದು, ಇವಿಎಂ ಭದ್ರತಾ ಕೊಠಡಿ ಮತ್ತು ಎಣಿಕೆ ಕೇಂದ್ರದ ಸಿದ್ಧತೆಯನ್ನು ಏಪ್ರಿಲ್ 29 ರಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಪರಿಶೀಲಿಸಿದರು.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಹರಪನಹಳ್ಳಿ ಸೇರಿದಂತೆ ಒಟ್ಟು 8 ವಿಧಾನಸಭಾ ಕ್ಷೇತ್ರಗಳು ಬರಲಿವೆ. ಎಲ್ಲಾ 8 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಶಿವಗಂಗೋತ್ರಿಯಲ್ಲಿ ನಡೆಯಲಿದೆ. ಇಲ್ಲಿನ ಕಾಮರ್ಸ್ ಬ್ಲಾಕ್ ನೆಲಮಹಡಿಯಲ್ಲಿ 4 ಕ್ಷೇತ್ರ ಮತ್ತು ರಾಜ್ಯಶಾಸ್ತ್ರ ಬ್ಲಾಕ್‌ನ ಮೊದಲ ಮಹಡಿಯಲ್ಲಿ 4 ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

### ಜೂನ್ 4 ರಂದು ತೋಳಹುಣಸೆ ದಾವಿವಿಯಲ್ಲಿ ಮತ ಎಣಿಕೆ

ಮೇ 7 ರಂದು ಮತದಾನ ನಡೆಯುವು ದರಿಂದ ಮತದಾನ ನಂತರ ಇವಿಎಂಗಳನ್ನು ಡಿಮಸ್ಟರಿಂಗ್ ಕೇಂದ್ರದಿಂದ ಭದ್ರತೆಯೊಂದಿಗೆ ಎಣಿಕಾ ಕೇಂದ್ರಕ್ಕೆ ತಂದು ಭದ್ರತಾ ಕೊಠಡಿಯಲ್ಲಿ ಮತಪೆಟ್ಟಿಗೆಯನ್ನು ಕಾಯ್ದಿರಿಸಲಾಗುತ್ತದೆ. ಮೇ 8 ರಿಂದ ಎಣಿಕೆ ನಡೆಯುವವರೆಗೆ ಅರೆ ಸೇನಾಪಡೆಯ ಭದ್ರತೆಯೊಂದಿಗೆ ಜೂನ್ 4 ರಂದು ನಡೆಯುವ ಎಣಿಕೆವರೆಗೆ ಸಂಪೂರ್ಣ ಸರ್ಪಗಾವಲಿನ ಭದ್ರತಾ ವ್ಯವಸ್ಥೆ ಮಾಡಲಾಗಿರುತ್ತದೆ. ಮತದಾನದ ನಂತರ ಇವಿಎಂಗಳನ್ನು ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸುವುದರಿಂದ ಎಣಿಕೆ ಸಿದ್ಧತೆಯನ್ನು ಈಗಲೇ ಮಾಡಿಕೊಳ್ಳಬೇಕಾಗಿದ್ದು ಸಿದ್ಧತೆಯನ್ನು ಪರಿಶೀಲಿಸಲಾಯಿತು.

**ಎಣಿಕೆ ಪೂರ್ವ ಇವಿಎಂ ಭದ್ರತೆಗೆ ಟ್ರಿಪಲ್ ಪದ್ಧತಿ:** ಮತದಾನದ ನಂತರ ಇವಿಎಂ ಸಂಗ್ರಹಿಸಲಾದ ಎಣಿಕೆ ಕೇಂದ್ರದಲ್ಲಿ ಸಿಸಿಟಿವಿ ಕಣ್ಗಾವಲು ಜೊತೆಗೆ 100 ಮೀಟರ್ ವ್ಯಾಪ್ತಿಯೊಳಗೆ ಸಿಎಪಿಎಫ್ ಕೇಂದ್ರ ಸಶಸ್ತ್ರ ಪೊಲೀಸ್ ಫೋರ್ಸ್ ಭದ್ರತೆಯನ್ನು ನೀಡಲಾಗುತ್ತದೆ ಮತ್ತು ನಂತರ ರಾಜ್ಯ ಸಶಸ್ತ್ರ ಮೀಸಲು ಪಡೆಯ ಭದ್ರತೆ ಒದಗಿಸಲಾಗಿರುತ್ತದೆ. ಚುನಾವಣಾಧಿಕಾರಿಗಳು ಪ್ರತಿದಿನ ಎರಡು ಭಾರಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವರು.

**ಇವಿಎಂ ಭದ್ರತಾ ಕೊಠಡಿ ಪರಿಶೀಲನೆಗೆ ಅಭ್ಯರ್ಥಿಗಳಿಗೂ ಅವಕಾಶ:** ಮೇ 7 ರಂದು ನಡೆಯುವ ಮತದಾನ ನಂತರ 1946 ಮತಗಟ್ಟೆಗಳಲ್ಲಿನ ಮತಪೆಟ್ಟಿಗೆಗಳನ್ನು ಎಣಿಕೆ ಕೇಂದ್ರದಲ್ಲಿನ ಭದ್ರತಾ ಕೊಠಡಿಗಳಲ್ಲಿ ಕ್ಷೇತ್ರವಾರು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಎಲ್ಲಾ ಭದ್ರತಾ ಕೊಠಡಿಗಳ ಸುತ್ತಲೂ ಸಿಸಿ ಕ್ಯಾಮರಾ ಅಳವಡಿಸಲಾಗುತ್ತದೆ. ಎಲ್ಲಾ ಕಿಟಕಿ, ಬಾಗಿಲುಗಳನ್ನು ಮುಚ್ಚಿ ಸೀಲ್ ಮಾಡಲಾಗಿರುತ್ತದೆ ಮತ್ತು ಪ್ರತಿ ಭದ್ರತಾ ಕೊಠಡಿಗೂ ಕೇಂದ್ರ ಸಶಸ್ತ್ರ ಪೊಲೀಸ್ ಫೋರ್ಸ್ ಕಾವಲಿರುತ್ತದೆ. ಭದ್ರತಾ ವ್ಯವಸ್ಥೆ ಪರಿಶೀಲಿಸಲು ಸಿಸಿಟಿವಿ ಅಳವಡಿಸಲಾಗಿದ್ದು, ಇದೆಲ್ಲದರ ನಿಯಂತ್ರಣಕ್ಕಾಗಿ ಕಂಟ್ರೋಲ್ ರೂಂ ಸ್ಥಾಪಿಸಲಾಗುತ್ತದೆ. ಇಲ್ಲಿ ಎಲ್ಲಾ ಕಡೆಯ ಸಿಸಿಟಿವಿಗಳ ಪ್ರದರ್ಶನ ಇರಲಿದೆ. ಅಭ್ಯರ್ಥಿಗಳು ಕಂಟ್ರೋಲ್ ರೂಂಗೆ ಬಂದು ಪರಿಶೀಲಿಸಬಹುದಾಗಿದೆ. ಆದರೆ ಆಗಮಿಸುವ ಬಗ್ಗೆ 24 ಗಂಟೆ ಮುಂಚಿತವಾಗಿ ಮಾಹಿತಿ ನೀಡಿ ಬರಬೇಕಾಗುತ್ತದೆ. ಅವರು ಅಲ್ಲಿಯೇ ಇದ್ದು ನೋಡಲು ಸಹ ಅವಕಾಶ ಇರುತ್ತದೆ.

ಪರಿಶೀಲನೆ ವೇಳೆ ಅಪರ ಜಿಲ್ಲಾಧಿಕಾರಿ ಸೈಯದಾ ಅಫ್ರಿನ್ ಭಾನು ಎಸ್.ಬಳ್ಳಾರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮಂಜುನಾಥ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ನೌಕಾ ದಳದ ಮುಖ್ಯಸ್ಥರಾಗಿ ತ್ರಿಪಾಠಿ ಅಧಿಕಾರ ಸ್ವೀಕಾರ



ನವದೆಹಲಿ, ಏ. 30 - ನೌಕಾ ದಳದ ಮುಖ್ಯಸ್ಥರಾಗಿ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಸಂಪರ್ಕ ಹಾಗೂ ಎಲೆಕ್ಟ್ರಾನಿಕ್ ಸಮರದಲ್ಲಿ ಪರಿಣಿತರಾಗಿದ್ದಾರೆ.

ಆರ್. ಹರಿಕುಮಾರ್ ಅವರು ಸೇವೆಯಿಂದ ನಿವೃತ್ತರಾದ ನಂತರ, ನೌಕಾ ದಳದ 26ನೇ ಮುಖ್ಯಸ್ಥರಾಗಿ ತ್ರಿಪಾಠಿ ಅಧಿಕಾರ ವಹಿಸಿಕೊಂಡಿದ್ದಾರೆ. ಸುಮಾರು 39 ವರ್ಷಗಳಿಂದ ಅವರು ನೌಕಾ ದಳದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ.

## ಶ್ರೀನಿವಾಸ್ ಪ್ರಸಾದ್ ನಿಧನಕ್ಕೆ ಸಿದ್ದೇಶ್ವರ ಸಂತಾಪ

ದಾವಣಗೆರೆ, ಏ.30- ಚಾಮರಾಜ ನಗರದ ಬಿಜೆಪಿ ಸಂಸದ ಶ್ರೀನಿವಾಸ್ ಪ್ರಸಾದ್ ಅವರು ನಿಧನವಾಗಿರುವುದು ಬಿಜೆಪಿಗೆ ತುಂಬಲಾರದ ನಷ್ಟವಾಗಿದೆ ಎಂದು ಸಂಸದ ಜಿ.ಎಂ ಸಿದ್ದೇಶ್ವರ ಸಂತಾಪ ಸೂಚಿಸಿದ್ದಾರೆ.

# ವೀರಶೈವ ಸಮಾಜ ರಕ್ಷಿಸಿದ ಕುಟುಂಬಕ್ಕೆ ಬೆಂಬಲಿಸಿ



### ವೀರಶೈವ - ಲಿಂಗಾಯತ ಸಭಾದ ಕಾರ್ಯದರ್ಶಿ ರೇಣುಕಾ ಪ್ರಸನ್ನ

ದಾವಣಗೆರೆ, ಏ.30- ವೀರಶೈವ ಸಮಾಜ ಒಡೆಯುವ ಸಂದರ್ಭದಲ್ಲಿ ಪಕ್ಷವನ್ನು ಲೆಕ್ಕಿಸದೇ ಸಮಾಜಕ್ಕೆ ಬೆನ್ನೆಲುಬಾಗಿ ನಿಂತ ಶಾಮನೂರು ಶಿವಶಂಕರಪ್ಪನವರ ಕುಟುಂಬಕ್ಕೆ ಚುನಾವಣೆಯಲ್ಲಿ ಬೆಂಬಲಿಸೋಣ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕಾರ್ಯದರ್ಶಿ ರೇಣುಕಾ ಪ್ರಸನ್ನ ಹೇಳಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಬೆಂಬಲಿತ ಪಂಚಮಸಾಲಿ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಮಾಜಿಕ ಕಳಕಳಿ ಹೊಂದಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಪಂಚಮಸಾಲಿ ಸಮಾಜ ಸಂಪೂರ್ಣ ಬೆಂಬಲ ನೀಡಿದರೆ ಈ ಸಮಾಜಕ್ಕೆ ಇನ್ನೂ ಹೆಚ್ಚಿನ ಬಲ ಬರಲಿದೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿಗರು ಮೋದಿ ಹೆಸರಿನಿಂದ ಮತ ಕೇಳುತ್ತಿದ್ದಾರೆ. ಸ್ಥಳೀಯವಾಗಿ ಕೆಲಸ ಮಾಡಲು ಮೋದಿ ಅವರು ಬರಲ್ಲ. ಆದ್ದರಿಂದ ನಮ್ಮ ಸಮಸ್ಯೆಗೆ ಸ್ಪಂದಿಸುವ ಪ್ರಭಾ ಅವರನ್ನು ಗೆಲ್ಲಿಸೋಣ ಎಂದರು.

ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಕ್ಷಿಸಲು ಈ ಬಾರಿ ನಾವು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಬೇಕು.

ಈ ನಿಟ್ಟಿನಲ್ಲಿ ಸಮಾಜದ ಪ್ರತಿಯೋರ್ವರು ನಮ್ಮದೇ ಚುನಾವಣೆ ಎಂದು ಭಾವಿಸಿ ಪ್ರಭಾ ಅವರ ಗೆಲುವಿಗೆ ಶ್ರಮಿಸೋಣ ಎಂದರು.

ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಪ್ರಕಾಶ್ ಪಾಟೀಲ್ ಮಾತನಾಡಿ, ಪಂಚಮಸಾಲಿ ಸಮಾಜದ ಹಿತ ಕಾಪಾಡುವ ಶಾಮನೂರು ಕುಟುಂಬಕ್ಕೆ ನಾವು ಬೆಂಬಲ ನೀಡೋಣ ಎಂದು ಕರೆ ನೀಡಿದರು.

ಶೋಷಿತರ ಚಿಂತನೆ ಹಾಗೂ ಜನರ ಆರೋಗ್ಯ ಕಾಳಜಿ ಹೊಂದಿರುವ ಡಾ. ಪ್ರಭಾ ಅವರನ್ನು ಗೆಲ್ಲಿಸಿದರೇ ಸಂಸತ್‌ನಲ್ಲಿ ಸ್ಥಳೀಯ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವ ಭಾಷಾ ಸಾಮರ್ಥ್ಯ ಅವರಲ್ಲಿದೆ ಎಂದರು.

ಮೋದಿ ಅವರ ಹೆಸರಿನಲ್ಲಿ ವೋಟು ಪಡೆದು ಪಂಚಮಸಾಲಿ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆ ಆದ್ದರಿಂದ ಸಮಾಜದ ಮುಖಂಡರೆಲ್ಲರೂ ಒಗ್ಗಟ್ಟಿನಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸೋಣ ಎಂದರು.

ಶಾಸಕ ಶಾಮನೂರು ಶಿವಶಂಕರಪ್ಪ, ಕಾಂಗ್ರೆಸ್ ಮುಖಂಡ ಅರಸಿಕೆರೆ ಕೊಟ್ರೇಶ್, ನಾಗರಾಜ್, ಸಮಾಜದ ಮುಖಂಡರಾದ ಅಶೋಕ್ ಗೋಮನಾಳ್, ಭರಮಸಾಗರ ತಿಪ್ಪೇಸ್ವಾಮಿ, ನೀಲಗುಂದ ಸಿದ್ಲಿಂಗಪ್ಪ, ಜಗಳೂರಿನ ಶಿವಕುಮಾರ್, ಅಜ್ಜಣ್ಣ, ಐಗೋಳ್ ಚಿದಾನಂದಪ್ಪ ಸೇರಿದಂತೆ ಸಮಾಜದ ಮುಖಂಡರು ಇದ್ದರು.

# ದಾವಣಗೆರೆಯಲ್ಲಿರುವುದು ಅಭಿವೃದ್ಧಿಯ ಹವಾ



### ಮಾಯಕೊಂಡ ಕ್ಷೇತ್ರದಲ್ಲಿ ಪ್ರಭಾ ಮಲ್ಲಿಕಾರ್ಜುನ್ ಮತಯಾಚನೆ

ದಾವಣಗೆರೆ, ಏ. 30- ದಾವಣಗೆರೆ ಲೋಕ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಹವಾನೂ ಇಲ್ಲ. ಅಭಿವೃದ್ಧಿ ಹವಾ ಒಂದೇ ಇರುವುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಗ್ರಾಮದಿಂದ ಇಂದು ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು ಕತ್ತಲಗೆರೆ, ಕವಳಿ ತಾಂಡ ಕ್ಯಾಂಪ್, ಕಶೆಟ್ಟಿಹಳ್ಳಿ, ಬೆಳಲಗೆರೆ, ಸಂಗಾಹಳ್ಳಿ, ಕುರುಬರಹಳ್ಳಿ, ರೆಡ್ಡಿಹಳ್ಳಿ, ಹರ್ಲಿಪುರ, ಮರಬನಹಳ್ಳಿ, ಕೋಟೆಹಾಳ್, ಹರೋಸಾಗರ, ಸಾಗರಪೇಟೆ, ಬಸವಾಪಟ್ಟಣ, ದಾಗಿನಕಟ್ಟೆ, ಯಲೋದಹಳ್ಳಿ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್.ಮಲ್ಲಿಕಾರ್ಜುನ್ ಅವರ ಅಭಿವೃದ್ಧಿ ಹವಾ ಮಾತ್ರ ದಾವಣಗೆರೆಯಲ್ಲಿದ್ದು, ದಾವಣಗೆರೆಯ ಎರಡೂ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿ ಆಗಿದ್ದು, ಮುಂದಿನ ದಿನಗಳಲ್ಲಿ ನಾನೂ ಸಹ ದಾವಣಗೆರೆ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸ್ಥಳೀಯ ಶಾಸಕರುಗಳ ಸಹಕಾರದೊಂದಿಗೆ ಒತ್ತು ನೀಡಲಿದ್ದೇನೆ ಎಂದರು.

ದಾವಣಗೆರೆ ದಕ್ಷಿಣ ಮತ್ತು ಉತ್ತರ ಕ್ಷೇತ್ರಗಳು ಇಡೀ ರಾಜ್ಯಕ್ಕೆ ಮಾದರಿಯಂತೆ ಅಭಿವೃದ್ಧಿ ಆಗಿದ್ದು, ಎಲ್ಲಾ ಕ್ಷೇತ್ರಕ್ಕೂ ಅನುದಾನ ಕಲ್ಪಿಸಲಾಗಿದೆ. ಎಸ್ಸೆಸ್, ಎಸ್ಸೆಸ್ಸೆಂ ಅವರುಗಳು ಅಭಿವೃದ್ಧಿ ಮಾಡದಿದ್ದರೆ ಸಂಸದರನ್ನು ನೆಚ್ಚಿ ಕುಳಿತಿದ್ದರೆ ಜನರು ಸಂಕಷ್ಟ ಪರಿಸ್ಥಿತಿ ಅನುಭವಿಸಬೇಕಾಗುತ್ತಿತ್ತು. ಇಂತಹ ಸಂಸದರನ್ನು ಮನೆಗೆ ಕಳುಹಿಸಬೇಕಿದೆ ಎಂದು ಅವರು ಕರೆ ನೀಡಿದರು.

ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ನೀಡಿದಂತೆ ಸರ್ಕಾರ ಬಂದ ತಕ್ಷಣ ಐದು ಯೋಜನೆಗಳನ್ನು ಜಾರಿಗೆ ತಂದು ಇಂದು ಚನ್ನಗಿರಿ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.110 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರೆಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯ ದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯ ದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸುವುದು, ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್ ಸೇರಿದಂತೆ ಮತ್ತಿತರರಿದ್ದರು.

## ಹರಿಹರ ತಾಲ್ಲೂಕಿನಲ್ಲಿ ಇಂದು ವಿನಯ್ ಕುಮಾರ್ ಮತಯಾಚನೆ



ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಹರಿಹರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ರೋಡ್ ಶೋ ನಡೆಸಿ ಮತಯಾಚನೆ ಮಾಡಲಿದ್ದಾರೆ.

ಬೆಳಿಗ್ಗೆ 8 ಗಂಟೆಗೆ ಬನ್ನಿಕೋಡು, 8.30ಕ್ಕೆ ಕೆ. ಬೇವಿನಹಳ್ಳಿ, 9 ಗಂಟೆಗೆ ಸಲಗನಹಳ್ಳಿ, 9.15ಕ್ಕೆ ಬೆಲ್ಲದಹಳ್ಳಿ, 9.45ಕ್ಕೆ ಮಲೇಬೆನ್ನೂರು, 10.15ಕ್ಕೆ ಭಾನುವಳ್ಳಿ, 10.45ಕ್ಕೆ ಲಕ್ಕಶೆಟ್ಟಿಹಳ್ಳಿ, 11.30ಕ್ಕೆ ಕಮಲಾಪುರ, ಮಧ್ಯಾಹ್ನ 12 ಗಂಟೆಗೆ ಕಡರನಾಯಕನಹಳ್ಳಿ, 1 ಗಂಟೆಗೆ ವಾಸನ, 1.15ಕ್ಕೆ ಉಕ್ಕಡಗಾತ್ರಿ, 1.45ಕ್ಕೆ ಮರಳಿಹಳ್ಳಿ, 2.15ಕ್ಕೆ ಎಳೆಹೊಳೆ, 3 ಗಂಟೆಗೆ ಇಂಗಳಗೊಂದಿ, ದೂಳೆಹೊಳೆ, 3.30ಕ್ಕೆ ನಂದಿಗಾವಿ, ಸಂಜೆ 4 ಗಂಟೆಗೆ ಬಿಳಸನೂರು, 4.30ಕ್ಕೆ ತಿಮ್ಲಾಪುರ, 5 ಗಂಟೆಗೆ ರಾಜನಹಳ್ಳಿ. ಸಂಜೆ 5.30ರಿಂದ ರಾತ್ರಿ 10 ಗಂಟೆಯವರೆಗೆ ಹರಿಹರ ಎಪಿಎಂಸಿ, ಹರಿಹರೇಶ್ವರ ದೇವಸ್ಥಾನ ರಸ್ತೆ, ಕೆಇಬಿ ರಸ್ತೆ, ಹರಪನಹಳ್ಳಿ ಸರ್ಕಲ್, ಎ.ಕೆ. ಕಾಲೋನಿ ರಸ್ತೆ, ಹರ್ಲಾಪುರ ರಸ್ತೆ, ಶಿವಮೊಗ್ಗ ರಸ್ತೆ ಮೂಲಕ ಜೆಸಿ ಬಡಾವಣೆ ನಾಲ್ಕನೇ ಮೇನ್ ಆಸ್ಪತ್ರೆ ರಸ್ತೆ ಮಾರ್ಗವಾಗಿ ಪಿ. ಬಿ. ರಸ್ತೆಯವರೆಗೆ ವಿನಯ್‌ಕುಮಾರ್ ರೋಡ್ ಶೋ ನಡೆಸಲಿದ್ದಾರೆ.

## ಹರಿಹರ ತಾಲ್ಲೂಕಿನಲ್ಲಿ ಇಂದು ಗಾಯತ್ರಿ ಸಿದ್ದೇಶ್ವರ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಹರಿಹರ ವಿಧಾನಸಭಾ ಕ್ಷೇತ್ರದಲ್ಲಿ ಮತಯಾಚನೆ ಮಾಡಲಿದ್ದಾರೆ. ಹರಿಹರ ಪಟ್ಟಣದಲ್ಲಿ ಇಂದು ಬೆಳಗ್ಗೆ 8ರಿಂದ 10ರವರೆಗೆ ರೋಡ್ ಶೋ ನಡೆಸುವ ಮೂಲಕ ಮತ ಯಾಚಿಸಲಿದ್ದಾರೆ.

ಬಳಿಕ 10.30ಕ್ಕೆ ನಂದಿಗಾವಿ,10.45 ಕ್ಕೆ ಧೂಳೆಹೊಳೆ, 11.10ಕ್ಕೆ ಇಂಗಳಗೊಂದಿ, 11.30ಕ್ಕೆ ಹುಲುಗಿನಹೊಳೆ, 11.50 ಕ್ಕೆ ಎಳೆಹೊಳೆ, 12.15 ಕ್ಕೆ ಮಳಲಹಳ್ಳಿ,12.30 ಕ್ಕೆ ಪಾಳ್ಯ, ಮಧ್ಯಾಹ್ನ 12.50 ಕ್ಕೆ ನಿಟ್ಟೂರು ಮಧ್ಯಾಹ್ನ 1 ಕ್ಕೆ ಆದಾಪುರ, 1.20 ಕ್ಕೆ ಬೂದಿಹಾಳ್, 1.45 ಕ್ಕೆ ನೆಹರು ಕ್ಯಾಂಪ್, 2 ಕ್ಕೆ ಮಲ್ಲನಾಯಕನಹಳ್ಳಿ, 2.15 ಸಂಕ್ಲಿಪುರ, 2.30 ಕ್ಕೆ ಗುಡ್ಡದಹಳ್ಳಿ ಗ್ರಾಮಗಳಲ್ಲಿ ಮತಯಾಚನೆ ನಡೆಸಲಿದ್ದಾರೆ.

ಸಂಜೆ 4 ಗಂಟೆಗೆ ಚನ್ನಗಿರಿ ಪಟ್ಟಣದಲ್ಲಿ, 6 ಕ್ಕೆ ಸಂತೆಬೆನ್ನೂರು ಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸುವ ಮೂಲಕ ಮತಯಾಚನೆ ನಡೆಸಲಿದ್ದಾರೆ.

## ಹೊನ್ನಾಳಿ ತಾಲ್ಲೂಕಿನಲ್ಲಿ ಇಂದು ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಹೊನ್ನಾಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಮಾಸಡಿ ಗ್ರಾಮದಿಂದ ಬೆಳಿಗ್ಗೆ 9 ರಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಹರಳಹಳ್ಳಿ, ಗೋವಿನಕೋವಿ, ಚಿ. ಕಡದಕಟ್ಟೆ, ಚೀಲೂರು, ಬಸವನಹಳ್ಳಿ, ಅರಬಗಟ್ಟೆ, ಆರುಂಡಿ, ಸುರಹೊನ್ನೆ, ನ್ಯಾಮತಿ ಗ್ರಾಮಗಳಲ್ಲಿ ಸಂಜೆ 5 ಗಂಟೆಯವರೆಗೆ ಮತಯಾಚನೆ ಮಾಡುವರು. ನಂತರ ನ್ಯಾಮತಿಯಲ್ಲಿ ಆಯೋಜಿಸಿರುವ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುವರು.

ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ಡಿ.ಜಿ. ಶಾಂತನಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಯೋಗಿ, ಆರ್. ನಾಗಪ್ಪ ಮತ್ತು ಡಿ.ಜಿ. ವಿಶ್ವನಾಥ್ ತಿಳಿಸಿದ್ದಾರೆ.

## ಹಣಕ್ಕಾಗಿ ಮತ ಮಾರಿಕೊಳ್ಳದೆ ನನಗೆ ನೀಡಿ: ಎಂ.ಜಿ. ಶ್ರೀಕಾಂತ್



ದಾವಣಗೆರೆ, ಏ.30- ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ನವಭಾರತ ಸೇನಾ ಪಕ್ಷದ ವತಿಯಿಂದ ಸ್ಪರ್ಧಿಸಿದ್ದು, ತಮ್ಮ ಕ್ರಮ ಸಂಖ್ಯೆ 11ರ ಬೆಂಕಿ ಪಟ್ಟಣದ ಗುರುತಿಗೆ ಮತ ನೀಡುವಂತೆ ಅಭ್ಯರ್ಥಿ ಎಂ.ಜಿ. ಶ್ರೀಕಾಂತ್ ಮನವಿ ಮಾಡಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿ.ಬಿ. ರಸ್ತೆ ಅಗಲೀಕರಣ ಸೇರಿದಂತೆ, ಅನೇಕ ಸಮಸ್ಯೆಗಳ ಬಗ್ಗೆ ಸಾಮಾಜಿಕವಾಗಿ ಹೋರಾಟ ಮಾಡಿದ್ದೇನೆ. ಜನರ ಸಮಸ್ಯೆಗಳ ಅರಿವು ತಮಗಿದ್ದು, ಗೆದ್ದು ಸಂಸದನಾದರೆ ಜನರ ಸಮಸ್ಯೆಗಳನ್ನು ಖುದ್ದಾಗಿ ಪರಿಹರಿಸುತ್ತೇನೆ ಎಂದು ಹೇಳಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆ ನಿರ್ಮಾಣ, ಶಿಕ್ಷಣ, ಆರೋಗ್ಯ ಸುಧಾರಣೆ ನನ್ನ ಪ್ರಮುಖ ಆದ್ಯತೆಯಾಗಿದೆ. ಜನರು ತಮ್ಮ ಮತವನ್ನು ಹಣದಾಸೆಗೆ ಮಾರಾಟ ಮಾಡಿಕೊಳ್ಳದೆ ನನಗೆ ನೀಡುವಂತೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಡುಗೆ ಕಾರ್ಮಿಕರ ಸಂಘದ ಸದಸ್ಯರಾದ ಭಾಗ್ಯಮ್ಮ, ನ್ಯಾಯಕ್ಕಾಗಿ ಐಕ್ಯ ವೇದಿಕೆಯ ಕೆ.ಎನ್. ರವಿಕುಮಾರ್, ಲಕ್ಷ್ಮಿದೇವಿ, ಹೊನ್ನೂರು ಅಲಿ ಉಪಸ್ಥಿತರಿದ್ದರು.

# ಗುಜರಾತ್ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಬಿಡದ ಜಾತಿ ನಂಟು

ಅಹಮದಾಬಾದ್, ಏ. 30 - ಗುಜರಾತ್‌ನ ನಗರಗಳಲ್ಲಿ ಹಿಂದುತ್ವ ಪ್ರಾಮುಖ್ಯತೆಗೆ ಬಂದು ಜಾತಿವಾದ ಹಿಂದೆ ಸರಿದಿದೆ. ಆದರೆ, ಗ್ರಾಮೀಣ ಭಾಗಗಳಲ್ಲಿ ಈಗಲೂ ಜಾತಿ ಪ್ರಮುಖ ಅಂಶವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಗುಜರಾತ್‌ನ 6.5 ಕೋಟಿ ಜನರಲ್ಲಿ ಪಾಟಿದಾರರ ಜನಸಂಖ್ಯೆ ಶೇ.11-12ರಷ್ಟಿದೆ. ಇತರೆ ಹಿಂದುಳಿದ ವರ್ಗಗಳು ಹಲವಾರು ಸಮುದಾಯಗಳಲ್ಲಿ ಹಂಚಿದ್ದಾರೆ. ಗುಜರಾತ್ ಉತ್ತರದಲ್ಲಿ ಠಾಕೂರ್‌ಗಳು ಹೆಚ್ಚಾಗಿದ್ದರೆ, ಮಧ್ಯ ಗುಜರಾತ್ ಹಾಗೂ ಸೌರಾಷ್ಟ್ರದಲ್ಲಿ ಕೋಲಿ ಸಮುದಾಯದವರ ಸಂಖ್ಯೆ ಹೆಚ್ಚಾಗಿದೆ.

ಬಿಜೆಪಿ ಈ ಬಾರಿ ಆರು ಪಾಟಿದಾರರು, ಏಳು ಒ.ಬಿ.ಸಿ. ಹಾಗೂ ಮೂವರು ಕೋಲಿ ಸಮುದಾಯದವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಹಾಗೂ ಎ.ಎ.ಪಿ. ಮೈತ್ರಿಕೂಟದಿಂದ ಆರು ಪಾಟಿದಾರರು, ಏಳು ಒ.ಬಿ.ಸಿ. ಹಾಗೂ ಇಬ್ಬರು ಕೋಲಿ ಸಮುದಾಯದವರು ಕಣದಲ್ಲಿದ್ದಾರೆ.

ಗುಜರಾತ್‌ನ ಮೊದಲ ನಾಲ್ವರು ಮುಖ್ಯಮಂತ್ರಿಗಳು ಬ್ರಾಹ್ಮಣ, ಇಲ್ಲವೇ ವರ್ತಕ ಸಮುದಾಯದವರಾಗಿದ್ದರು. 70ರ ದಶಕದಲ್ಲಿ ಚಿಮನ್‌ಭಾಯಿ ಪಟೇಲ್ ಅವರು ಮುಖ್ಯಮಂತ್ರಿಯಾದ ನಂತರ ಪಾಟಿದಾರರು ರಾಜಕೀಯ ಮುನ್ನೆಲೆಗೆ ಬಂದಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಮಾಡುವಾಗ ಜಾತಿ ಪ್ರಮುಖ ಅಂಶವಾಗಿದೆ. ಜಾತಿಯನ್ನು ಕಡೆಗಣಿಸಲಾಗದು. ಇಂದು ಜಾತಿ ಹಾಗೂ ವರ್ಗ ಜೊತೆ ಜೊತೆಯಾಗಿ ಹೋಗುತ್ತಿವೆ. ಅಭ್ಯರ್ಥಿಗಳು ಶ್ರೀಮಂತ ಹಿನ್ನೆಲೆಯವರಾಗಿರಬೇಕು ಹಾಗೂ ನಿರ್ದಿಷ್ಟ ಜಾತಿಯವರಾಗಿರಬೇಕು ಎಂದು ರಾಜಕೀಯ ಪರಿಣಿತ ವಿದ್ಯುತ್ ಜೋಷಿ ಹೇಳಿದ್ದಾರೆ.

ಗ್ರಾಮಾಂತರ ಮತದಾರರು ತಮ್ಮ ಜಾತಿಯವರನ್ನು ಇಷ್ಟಪಡುತ್ತಾರೆ. ಅವರನ್ನು ಸಂಪರ್ಕಿಸುವುದು ಹಾಗೂ ತಮ್ಮ ಕೆಲಸ ಮಾಡಿಸಿಕೊಳ್ಳುವುದು ಸುಲಭ ಎಂದು ಭಾವಿಸಿದ್ದಾರೆ ಎಂದು ಜೋಷಿ ಹೇಳುತ್ತಾರೆ.

ಮಧ್ಯ ಹಾಗೂ ದಕ್ಷಿಣ ಗುಜರಾತ್‌ನ ನಗರ ಪ್ರದೇಶಗಳಲ್ಲಿ ಜಾತಿ ಪ್ರಭಾವ ಕಡಿಮೆಯಾಗುತ್ತಿದೆ. ಆದರೆ, ಗ್ರಾಮೀಣ ಭಾಗಗಳಾದ ಸೌರಾಷ್ಟ್ರ ಹಾಗೂ ಉತ್ತರ ಗುಜರಾತ್‌ನಲ್ಲಿ ಜಾತಿ ಈಗಲೂ ಪ್ರಮುಖ ಅಂಶ ಎಂದು ರಾಜಕೀಯ ವಿಶ್ಲೇಷಕ ಅಮಿತ್ ಢೊಲಾಕಿಯ ಹೇಳಿದ್ದಾರೆ.

### ಪ್ರಧಾನಿ ತವರು ರಾಜ್ಯದ ನಗರಗಳಲ್ಲಿ ಹಿಂದುತ್ವವೇ ಮಂತ್ರ

ನಗರೀಕರಣದಿಂದಾಗಿ ಜಾತಿ ಗುರುತು ದುರ್ಬಲವಾಗುತ್ತಿದೆ, ಬೇರೆ ವಿಷಯಗಳು ಮುನ್ನೆಲೆಗೆ ಬರುತ್ತಿವೆ. ತಮ್ಮ ಜಾತಿ ಪ್ರಬಲವಲ್ಲದ ಕ್ಷೇತ್ರಗಳಲ್ಲೂ ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ವಡೋದರದ ಎಂ.ಎಸ್. ವಿಶ್ವವಿದ್ಯಾಲಯದ ರಾಜಕೀಯಶಾಸ್ತ್ರ ಉಪನ್ಯಾಸಕ ಢೊಲಾಕಿಯ ಹೇಳಿದ್ದಾರೆ.

ಮೊದಲು ಜನರು ನೇರವಾಗಿ ತಮ್ಮ ಜಾತಿ ಮುಂದಿಟ್ಟು ಮತ ಕೇಳುತ್ತಿದ್ದರು. ಈಗ ಹಿಂದುತ್ವ ಇಲ್ಲವೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಅಜೆಂಡಾ ಮೂಲಕ ಮತ ಕೇಳುತ್ತಿದ್ದಾರೆ ಎಂದು ಢೊಲಾಕಿಯ ತಿಳಿಸಿದ್ದಾರೆ.

ಜಾತಿ ಮಸುಕಾಗಿಸಿ ಹಿಂದುತ್ವ ಗಟ್ಟಿಗೊಳಿಸುವ ಮೂಲಕ ಮತ ಕೇಳಲು ಬಿಜೆಪಿ ಬಯಸುತ್ತಿದೆ. ಮತ್ತೊಂದೆಡೆ ಜಾತಿ ಬಲಪಡಿಸುವ ಮೂಲಕ ಹಿಂದುತ್ವ ದುರ್ಬಲಗೊಳಿಸಬಹುದು ಎಂಬುದು ಐ.ಎನ್.ಡಿ.ಐ.ಎ. ಒಕ್ಕೂಟದ ಚಿಂತನೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಗುಜರಾತ್‌ನ ನಗರ ಪ್ರದೇಶಗಳಲ್ಲಿ ಜಾತೀಯತೆ ಕಡಿಮೆಯಾಗಿದ್ದೇ ಕಾಂಗ್ರೆಸ್ ಸೋಲಿಗೆ ಪ್ರಮುಖ ಕಾರಣ ಎಂದೂ ಅವರು ಪ್ರತಿಪಾದಿಸುತ್ತಾರೆ.

ಸೌರಾಷ್ಟ್ರ ಸೇರಿದಂತೆ ಕೆಲವೆಡೆ ಜಾತಿ ಪ್ರಮುಖ ಅಂಶವಾಗಿದೆ. ಆದರೆ, ಪಾಟಿದಾರರನ್ನು ಹೊರತು ಪಡಿಸಿದರೆ ಕ್ಷತ್ರೀಯರೂ ಸೇರಿದಂತೆ ಹಲವು ಜಾತಿಯವರ ಪ್ರಾಬಲ್ಯ ಕಡಿಮೆಯಾಗುತ್ತಿದೆ. ಜಾತಿ ಅಂಶವನ್ನು ಕಡೆಗಣಿಸಲಾಗದು. ಆದರೆ, ಹಿಂದುತ್ವ ಕೇಂದ್ರಿತ ರಾಜಕೀಯದಿಂದಾಗಿ ಜಾತಿ ಪ್ರಭಾವ ಕಡಿಮೆಯಾಗುತ್ತಿದೆ ಎಂದು ಢೊಲಾಕಿಯ ಹೇಳಿದ್ದಾರೆ.

ಗುಜರಾತ್ ರಾಜಕೀಯದಲ್ಲಿ ಬಿಜೆಪಿ ಪ್ರವೇಶವಾದ 1980ರ ನಂತರ ಗುಜರಾತ್‌ನಲ್ಲಿ ಜಾತಿ ಮುನ್ನೆಲೆಗೆ ಬಂದಿದೆ. ವೈಯಕ್ತಿಕ ವರ್ಚಸ್ಸು ಹಾಗೂ ಸಾಮಾಜಿಕ ಸಂಪರ್ಕದ ಜೊತೆಗೆ ಜಾತಿಯೂ ಅಭ್ಯರ್ಥಿಗಳ ಆಯ್ಕೆಗೆ ಪ್ರಮುಖ ಅಂಶವಾಗಿದೆ ಎಂದು ರಾಜಕೋಟ್‌ನ ರಾಜಕೀಯ ವಿಶ್ಲೇಷಕ ಜಗದೀಶ್ ಮೆಹ್ತ ಹೇಳಿದ್ದಾರೆ.

ಆದರೆ, ಈ ವಾದವನ್ನು ಪೂರ್ಣ ಒಪ್ಪದ ಗುಜರಾತ್ ಬಿಜೆಪಿ ವಕ್ತಾರ ಯಮಲ್ ವ್ಯಾಸ್, ನಾವು ಜಾತಿಗೆ ಪ್ರಾಮುಖ್ಯತೆ ನೀಡುವುದಿಲ್ಲ. ನಾವು ಸಮತೋಲನ ಕಾಯ್ದುಕೊಳ್ಳಬೇಕಾಗುತ್ತದೆ. ಪಕ್ಷ ನಿಷ್ಠೆ, ಗೆಲ್ಲುವ ಸಾಮರ್ಥ್ಯ ಹಾಗೂ ಶೈಕ್ಷಣಿಕ ಅರ್ಹತೆ ಪರಿಗಣಿಸುತ್ತೇವೆ ಎಂದಿದ್ದಾರೆ.

ಈ ಬಗ್ಗೆ ಮಾತನಾಡಿರುವ ರಾಜ್ಯ ಕಾಂಗ್ರೆಸ್ ವಕ್ತಾರ ಮನೀಶ್ ದೋಶಿ, ಮತದಾರರ ಮೇಲೂ ಹೊಣೆಗಾರಿಕೆ ಇದೆ. ಮತದಾರರು ಅರ್ಹರಾದ ಅಭ್ಯರ್ಥಿಗಳನ್ನು ತಿರಸ್ಕರಿಸುತ್ತಾ ಹೋದರೆ, ಜಾತಿಯಂತಹ ವಿಷಯಗಳನ್ನು ಪರಿಗಣಿಸಬೇಕಾಗುತ್ತದೆ ಎಂದಿದ್ದಾರೆ.

ಮತದಾರರ ಮನೋಭಾವ ಆಧರಿಸಿಯೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಈ ಹಿಂದೆ ಟಿ.ಎನ್. ಶೇಷನ್ ರೀತಿಯ ಅಭ್ಯರ್ಥಿಗಳೇ ಠೇವಣಿ ಉಳಿಸಿಕೊಳ್ಳಲು ಪರದಾಡಬೇಕಾಯಿತು. ಪ್ರಾಮಾಣಿಕರಾದ ನಿವೃತ್ತ ಸರ್ಕಾರಿ ನೌಕರರು ಪರಾಭವಗೊಂಡಿದ್ದಾರೆ. ಇದರಿಂದಾಗಿ ಪಕ್ಷಗಳು ಅಭ್ಯರ್ಥಿಗಳ ಗುಣಮಟ್ಟದ ಬದಲು ಗೆಲ್ಲುವ ಸಾಮರ್ಥ್ಯವನ್ನು ಪರಿಗಣಿಸುತ್ತಾರೆ ಎಂದವರು ತಿಳಿಸುತ್ತಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas